ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಏಪ್ರಿಲ್ 2022

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2958444

ಸಂಪುಟ-22 ಸಂಚಿಕೆ-4 ಪುಟಗಳು-8 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

# ನಂದಳಿಕೆ ತಂಡಕ್ಕೆ ಶ್ರೀ ಶಾರದಾ ಟ್ರೋಫಿ–2022






**ಉದ್ಘಾಟನಾ ಸಮಾರಂಭ :** "ಸತತ 32 ವರ್ಷಗಳಿಂದ ಸಂಘಟನೆಯೊಂದು ನಿರಂತರವಾಗಿ ಶ್ರೀಶಾರದಾ ಟ್ರೋಫಿ ಸೌಹಾರ್ದ ಕ್ರೀಡಾ ಚಟುವಟಿಕೆಗಳನ್ನು ನೆಡೆಸಿಕೊಂಡು ಬರುತ್ತಿರುವುದು ಬಹಳ ಶ್ರಮದ ಕೆಲಸ. ಅದರಲ್ಲಿಯೂ ಯುವಶಕ್ತಿಯ ಒಗ್ಗೂಡುವಿಕೆಗಾಗಿ ಮಾಡುವ ಈ ಕ್ರಿಕೆಟ್ ಪಂದ್ಯಾಟವು ಸಾಮಾಜಿಕವಾಗಿ ಉತ್ತಮ ಕಾರ್ಯ. ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘವು ಮಾಡುವ ಈ ಉನ್ನತ ಕಾರ್ಯ ಶ್ಲಾಘನೀಯವಾಗಿದೆ." ಎಂದು ಮಣಿಪಾಲ ಕೆಎಂಸಿಯ ಡೀನ್ ಪ್ರೊ| ಶರತ್‌ರಾವ್ ಹೇಳಿದರು. ಅವರು ಉಡುಪಿಯ ಎಂಜಿಎಂ ಕ್ರೀಡಾಂಗಣದಲ್ಲಿ ತಾ.13.3.2022ರಂದು ನಡೆದ 32ನೇ ವರ್ಷದ ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮೇಲಿನಂತೆ ನುಡಿದರು. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ಆಗಮಿಸಿದ್ದ ಎಲ್ಲರನ್ನು ಸ್ವಾಗತಿಸಿದರು. ಮಾಜಿ ಅಧ್ಯಕ್ಷರಾದ ಶ್ರೀ ಸಿಎಸ್ ರಾವ್, ಶ್ರೀ ಭುವನೇಂದ್ರರಾವ್, ಉಪಾಧ್ಯಕ್ಷರಾದ ಅರವಿಂದ ಕುಮಾರ್, ಕಾರ್ಯದರ್ಶಿ ಪ್ರಭಾಕರ ಭಂಡಿ, ಯುವವೇದಿಕೆಯ ಅಧ್ಯಕ್ಷ ಶ್ರೀ ಸಂತೋಷ್ ರಾವ್ ಚಿಟ್ಪಾಡಿ ಮೊದಲಾದವರು ವೇದಿಕೆಯಲ್ಲಿದ್ದು, ಅತಿಥಿಗಳ ಜೊತೆ ಸೇರಿ ಆಗಮಿಸಿದ್ದ ಎಲ್ಲ ಕ್ರೀಡಾಳು ತಂಡಗಳ ಪರಿಚಯ ಮಾಡಿಕೊಂಡರು.

(3ನೇ ಪುಟಕ್ಕೆ...)

## ಮಹಿಳಾ ವೇದಿಕೆ : ಒಳಾಂಗಣ ಕ್ರೀಡೆಗಳು



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ ಇದರ ಅಂಗವಾದ ಮಹಿಳಾ ವೇದಿಕೆಯಿಂದ ಮಹಿಳೆಯರು ಮತ್ತು ಮಕ್ಕಳಿಗೆ ಒಳಾಂಗಣ ಕ್ರೀಡೆಗಳು ತಾ.13.03.2022ರಂದು ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು ಇಲ್ಲಿ ಜರುಗಿತು.

(ವರದಿ 3ನೇ ಪುಟಕ್ಕೆ...)


## ಶ್ರೀ ಶಾರದಾ ದೇವಸ್ಥಾನದಲ್ಲಿ ಪ್ರತಿಷ್ಠಾವರ್ಧಂತಿ ಸಂಪನ್ನ



ತಾ.14.03.2022ರಂದು ಶ್ರೀ ಶಾರದಾ ದೇವಸ್ಥಾನದ ಶ್ರೀ ಶಾರದಾ ದೇವರ ಪ್ರತಿಷ್ಠಾ ವರ್ಧಂತಿ ಕಾರ್ಯಕ್ರಮವು ಪುರೋಹಿತರಾದ ಜಗದೀಶ ಉಪಾಧ್ಯಾಯ ಇವರ ಉಪಸ್ಥಿತಿಯಲ್ಲಿ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು. ಕರ್ತೃಗಳಾಗಿ ಶ್ರೀ ಪಿ. ಹರಿನಾರಾಯಣ ಭಂಡಿ ಹಾಗೂ ಶ್ರೀಮತಿ ಕುಸುಮಾ ಮತ್ತು ನಮ್ಮ ಸಂಘದ ಅಧ್ಯಕ್ಷರು, ಕಾರ್ಯದರ್ಶಿ, ಸಮಾಜ ಬಾಂಧವರೆಲ್ಲರೂ ಉಪಸ್ಥಿತರಿದ್ದರು. ನಂತರ ಯಾಗ ಶಾಲೆಯಲ್ಲಿ ಪ್ರತಿಷ್ಠಾಮಹೋತ್ಸವದ ಕಾರ್ಯಕ್ರಮದ ಪ್ರಯುಕ್ತ ಗಣಹೋಮವನ್ನು ಪುರೋಹಿತರಾದ ಸುಬ್ರಹ್ಮಣ್ಯ ಉಪಾಧ್ಯಾಯರು ನೆರವೇರಿಸಿದರು. ದೇವಸ್ಥಾನದಲ್ಲಿ ನಮ್ಮ ಸಮಾಜ ಬಾಂಧವರು ರುದ್ರ ಪಾರಾಯಣ ಪಠಣ ಮಾಡಿದರು. ತದನಂತರ ಯಾಗಶಾಲೆಯಲ್ಲಿ ಶ್ರೀ ಶಾರದಾ ಮಹಿಳಾ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ ನೆರವೇರಿತು. ಅಪರಾಹ್ನ 12.15ಕ್ಕೆ ಮಹಾ ಪೂಜೆಯು ನೆರವೇರಿತು. ಅನ್ನಸಂತರ್ಪಣೆಯೊಂದಿಗೆ ಪ್ರತಿಷ್ಠಾವರ್ಧಂತಿ ಕಾರ್ಯಕ್ರಮ ಸಂಪನ್ನಗೊಂಡಿತು. ನಮ್ಮ ಸಂಘದ ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ, ಪದಾಧಿಕಾರಿಗಳು, ನಿರ್ದೇಶಕರು, ಸಮಾಜಬಾಂಧವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ-2.



ಶ್ರೀ ಶಾರದಾ ದೇವಸ್ಥಾನದಲ್ಲಿ

### ಶ್ರೀ ಶಂಕರ ಜಯಂತಿ ಆಚರಣೆಯು

ತಾ.06-05-2022ನೇ ಶುಕ್ರವಾರ ನೆರವೇರಲಿದೆ.

**ಕಾರ್ಯಕ್ರಮಗಳ ವಿವರ :** ಬೆಳಿಗ್ಗೆ 8-30 ಗಂಟೆಗೆ ಪ್ರಾರ್ಥನೆ, ಶ್ರೀ ಶಂಕರ ಅಷ್ಟೋತ್ತರ ಪಾರಾಯಣ, ಶ್ರೀ ಶಂಕರ ವಿಜಯ ಪಾರಾಯಣ, ಶ್ರೀ ಶಂಕರಾಚಾರ್ಯರ ಮೂರ್ತಿಗೆ ಅಭಿಷೇಕ ಹಾಗೂ ಪೂಜೆ, ಬೆಳಿಗ್ಗೆ 11 ಗಂಟೆಗೆ ಉಪನ್ಯಾಸ ಕಾರ್ಯಕ್ರಮ ಮತ್ತು ಮಧ್ಯಾಹ್ನ 12-30ಕ್ಕೆ ಅನ್ನಸಂತರ್ಪಣೆ ನಡೆಯಲಿದೆ. ಲಿಖಿತ ರಸಪ್ರಶ್ನೆ 10 ಗಂಟೆಗೆ. ವಿಷಯ : ಶ್ರೀ ಶಂಕರಾಚಾರ್ಯರ ಕುರಿತು. ವಿಭಾಗ : ಪ್ರಾಥಮಿಕ : 7ನೇ ತರಗತಿ ವರೆಗೆ, ಪ್ರೌಢವಿಭಾಗ : 10ನೇ ತರಗತಿ ವರೆಗೆ, ಹಿರಿಯ ವಿಭಾಗ : ಪಿಯುಸಿ ಮೇಲ್ಪಟ್ಟು. ನೋಂದಣೆ ಹಾಗೂ ಮಾಹಿತಿಗಾಗಿ ಸಂಪರ್ಕಿಸಿ : ಶ್ರೀ ಕೃಷ್ಣಕುಮಾರ್ ಮಟ್ಟು (9481760611)

–ಆಡಳಿತ ಮಂಡಳಿ

### ಸಾಮೂಹಿಕ ಉಪನಯನ

ಈ ವರ್ಷ **ಸಾಮೂಹಿಕ ಉಪನಯನ**ವು ಅಕ್ಷಯ ತದಿಗೆಯ ಶುಭ ದಿನವಾದ ತಾ.03-05-2022ರ ಮಂಗಳವಾರದಂದು ನಡೆಯಲಿದ್ದು ತಮ್ಮ ವಟುಗಳಿಗೆ ಉಪನಯನ ಸಂಸ್ಕಾರ ನಡೆಸುವರೇ ಆಸಕ್ತ ಸಮಾಜ ಬಾಂಧವರು ಕಾರ್ಯದರ್ಶಿ ಶ್ರೀ ಪಿ.ಪ್ರಭಾಕರ ಭಂಡಿ (9449254846) ಅಥವಾ ಸಂಘದ ಕಛೇರಿಯನ್ನು 0820-2958444ನಲ್ಲಿ ಸಂಪರ್ಕಿಸಬೇಕಾಗಿ ಕೋರುತ್ತೇವೆ.

–ಆಡಳಿತ ಮಂಡಳಿ



## ದೆಹಲಿಯಲ್ಲಿ ಡಾ। ವೈ. ರವೀಂದನಾಥ ರಾವ್ ಅವರ ಕೃತಿ ಬಿಡುಗಡೆ



ಎಸ್.ಎಂ.ಎಸ್. ಕಾಲೇಜಿನ ನಿವೃತ್ತ ಪ್ರಾಂಶುಪಾಲ, ಸಮಾಜಶಾಸ್ತ್ರ ಸಂಶೋಧಕ ಡಾ। ವೈ.ರವೀಂದ್ರನಾಥ ರಾವ್ ಅವರ 'ಬಿಂದೇಶ್ವರ್ ಪಾಠಕ್ ; ಎ ಸೋಶಲ್ ರಿಫಾರ್ಮರ್' ಕೃತಿಯುನ್ನು ಇತ್ತೀಚೆಗೆ ದೆಹಲಿಯಲ್ಲಿ ಸಂಸ್ಕೃತಿ ಮಂತ್ರಾಲಯದ ಸಹಯೋಗದೊಂದಿಗೆ ನಡೆದ ಸುಲಬ್ ಅಂತರಾಷ್ಟ್ರೀಯ ಸಂಸ್ಥೆಯ ಸ್ಥಾಪಕ ದಿನಾಚರಣೆಯಂದು, ಶೌಚಾಲಯ ಆಂದೋಲನದ ವಿಶ್ವಗುರು, ಪದ್ಮಭೂಷಣ ಡಾ। ಬಿಂದೇಶ್ವರ್ ಪಾಠಕ್ ಅವರು ಲೋಕಾರ್ಪಣೆ ಗೈದರು.

ದಕ್ಷಿಣ ಬಿಹಾರ ಕೇಂದ್ರೀಯ ವಿ.ವಿ.ಯ ಕುಲಪತಿ ಪ್ರೊ। ಕಾಮೇಶ್ವರ್‌ನಾಥ್ ಸಿಂಗ್, ಸಮಾಜಶಾಸ್ತ್ರಜ್ಞ ಡಾ। ರಿಚರ್ಡ್ ಪ್ಯಾಸ್, ಪದ್ಮಶ್ರೀ ಉಷಾ ಚೌಮಾರ್, ಸಂಸ್ಕೃತಿ ಮಂತ್ರಾಲಯದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ನಿರ್ದೇಶಕಿ ಶ್ರೀಮತಿ ಪ್ರಿಯಾಂಕ ಚಂದ್ರ ಮುಖ್ಯ ಅತಿಥಿಗಳಾಗಿದ್ದರು. ಕೃತಿಯ ಲೇಖಕ ಡಾ। ರಾವ್, ಶ್ರೀಮತಿ ಅಮೋಲಾ ಪಾಠಕ್ ಉಪಸ್ಥಿತರಿದ್ದರು.

ಒಟ್ಟು 294 ಪುಟಗಳ ದೆಹಲಿಯ ರೂಪಾ ಪ್ರಕಾಶನದ ಈ ಕೃತಿಯು ಸುಲಬ್ ಸ್ಥಾಪಕ ಡಾ। ಪಾಠಕ್ ಅವರ ಸಮಾಜ ಸುಧಾರಣೆ ಮತ್ತು ದೇಶವಿದೇಶಗಳಲ್ಲಿ ಶೌಚಾಲಯ ಕ್ಷೇತ್ರದಲ್ಲಿ ಅವರು ನೀಡಿದ ಅದ್ವಿತೀಯ ಕೊಡುಗೆಗಳ ಸಮಗ್ರ ಮಾಹಿತಿ ಒಳಗೊಂಡಿದೆ.


**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.

★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ


## ವೈ.ವಿ. ಮಧುಸೂದನ ರಾವ್ ಅವರಿಗೆ ಪಿಎಚ್‌ಡಿ ಪದವಿ



ಮುಂಬಯಿ ವಿಶ್ವವಿದ್ಯಾನಿಲಯದ ಸಂಶೋಧನ ಸಹಾಯಕ ವೈ.ವಿ. ಮಧುಸೂದನ್ ರಾವ್ ಅವರು ಬರೆದು ಸಲ್ಲಿಸಿದ ಮಹಾಪ್ರಬಂಧ ಮುಂಬಯಿ ಯಕ್ಷಗಾನ ರಂಗಭೂಮಿ ಎಂಬ ವಿಷಯಕ್ಕೆ ಮಂಬಯಿ ವಿಶ್ವವಿದ್ಯಾನಿಲಯ ಪಿಎಚ್‌ಡಿ ಪದವಿ ನೀಡಿ ಗೌರವಿಸಿದೆ. ಮಧುಸೂದನ ರಾವ್ ಅವರ ಕನ್ನಡ ವಿಭಾಗದ ಮುಖ್ಯಸ್ಥ ಡಾ। ಜಿ.ಎನ್. ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ಮಹಾಪ್ರಬಂಧ ಸಿದ್ಧಪಡಿಸಿ ಮುಂಬಯಿ ವಿವಿಗೆ ಪಿ.ಎಚ್.ಡಿ. ಪದವಿಗಾಗಿ ಪ್ರಸ್ತುತಪಡಿಸಿದ್ದರು.

ವಿಜ್ಞಾನ ವಿಷಯದಲ್ಲಿ ಮೈಸೂರು ವಿವಿಯಿಂದ ಪದವಿ ಪಡೆದ ಮಧುಸೂದನ ರಾವ್ ಅವರು ವಸ್ತೋದ್ಯಮ ಕ್ಷೇತ್ರದಲ್ಲಿ ಉನ್ನತ ಹುದ್ದೆಗಳಲ್ಲಿದ್ದು, ನಿವೃತ್ತಿ ಹೊಂದಿದ ಮೇಲೆ ಮಂಬಯಿ ವಿವಿಯಲ್ಲಿ ಕನ್ನಡ ಸ್ನಾತಕೋತ್ತರ ಪದವಿಯನ್ನು ವರದರಾಜ ಆದ್ಯ ಚಿನ್ನದ ಪದಕದೊಂದಿಗೆ ಪಡೆದರು. ಸ್ವತಃ ಯಕ್ಷಗಾನ ಕಲಾವಿದರಾದ ಇವರು ಮುಂಬಯಿಯ ಯಕ್ಷಗಾನ ಪ್ರದರ್ಶನ ಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ.

## ಡಾ। ವೈ.ಸುದರ್ಶನ್ ರಾವ್ ಇವರಿಗೆ ಅಭಿನಂದನೆ



ವಿಶ್ವ ಕ್ಷಯ ರೋಗ ದಿನಾಚರಣೆಯಂದು ಎನ್.ಟಿ.ಇ.ಪಿ ಕಾರ್ಯಕ್ರಮದಡಿಯಲ್ಲಿ ಖಾಸಗಿ ವಲಯದಲ್ಲಿ ಉತ್ತಮ ಕಾರ್ಯನಿರ್ವಹಿಸಿದ ನಮ್ಮ ಸಂಘದ ಮಾಜಿ ಉಪಾಧ್ಯಕ್ಷರು ಮತ್ತು ಸ್ಥಾನಿಕ ಮಹಾಮಂಡಲದ ಕಾರ್ಯದರ್ಶಿಯವರಾದ ಡಾ. ವೈ ಸುದರ್ಶನ್ ರಾವ್ ಇಂಚರ ಕ್ಲಿನಿಕ್ ಉಡುಪಿ ಇವರನ್ನು ಉಡುಪಿ ಜಿಲ್ಲಾ ಮಟ್ಟದ ವಿಶ್ವ ಕ್ಷಯ ರೋಗ ದಿನಾಚರಣೆಯ ದಿನ ಮಲ್ಪೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕು. ಕಲ್ಯಾಣ ಅಧಿಕಾರಿಯವರು ಮತ್ತು ನಗರಸಭೆ ಅಧ್ಯಕ್ಷರ ಉಪಸ್ಥಿತಿಯಲ್ಲಿ ಗುರುತಿಸಿ ಗೌರವಿಸಲಾಯಿತು.



ಕಾರ್ಪೋರೇಶನ್ ಬ್ಯಾಂಕಿನ ನಿವೃತ್ತ ಡಿಜಿಎಂ ಶ್ರೀ ಸಿ.ಎಸ್.ರಾವ್ ದಂಪತಿಗಳನ್ನು ಬ್ರಹ್ಮಾವರದ ಜಿ.ಎಮ್.ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್‌ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಂದರ್ಭದಲ್ಲಿ ಸನ್ಮಾನಿಸಲಾಯಿತು.


**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸ್ಯಾಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 10.00% (ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ



PRODUCTS ARE AVAILABLE AT ATTRACTIVE DISCOUNT PRICES



BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990





Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com

JALAJA SKIN CLINIC
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.



GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS

| | |
|---|---|
| Sri Balaji Complex, Shop No-G-7,<br>Near KSRTC Bus Stand,<br>Udupi - 576101. | City Towers, Service Bus Stand,<br>Near Rao and Rao Circle, State Bank,<br>Mangalore - 575001 |

Branch at Mahalaxmi Prabha Complex, Market Road, Opp Tajmahal Hotel, Karkala





ಡಾ। ವಿಜಯಾ ರಾವ್ ವೈ.ಬಿ
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು

Dr. Vijaya Rao Y.B.
MBBS DGO (DNB)
Consultant Obst. & Gynaecologist
Reg. No. 34499
Mobile : 9481230608
Email : vijayayb12@gmail.com

Indrani Maternity Clinic, Aisiri Complex,
Near Railway Station Bus Stop, Kunjibettu Post. Udupi - 576 102

## 32ನೇ ವರ್ಷದ ಶ್ರೀ ಶಾರದಾ ಟ್ರೋಫಿ–2022 ಕ್ರಿಕೆಟ್ ಪಂದ್ಯಾಟ

■...1ನೇ ಪುಟದಿಂದ

**ಸಮಾರೋಪ ಸಮಾರಂಭ :** ಸಮಾರೋಪ ಸಮಾರಂಭದಲ್ಲಿ ನಾವು ಆಹ್ವಾನಿಸಿರುವಂತೆ ಆಗಮಿಸಿದ್ದ ನಮ್ಮ ಅತಿಥಿ ನಿವೃತ್ತ ಮುಖ್ಯೋಪಾಧ್ಯಾಯ ಶ್ರೀ ಶ್ರೀನಿವಾಸ ರಾವ್ ಕಾಪು "ಕ್ರಿಕೆಟ್ ಪಂದ್ಯಾಟದ ಮೂಲಕ ಯುವಕರನ್ನು ಒಂದೆಡೆ ಸೇರುವಂತೆ ಮಾಡಿದ್ದು, ಅತ್ಯುತ್ತಮ ಕಾರ್ಯ. ಇಲ್ಲಿ ಈ ಕ್ರೀಡೆಗಳ ಜೊತೆ ಒಳಾಂಗಣ ಕ್ರೀಡೆಗಳನ್ನೂ ಮಹಿಳೆಯರಿಗೆ, ಮಕ್ಕಳಿಗೆ ಮಾಡುತ್ತಿದ್ದೀರಿ. ಈ ಕ್ರೀಡೆಗಳೊಂದಿಗೆ ಇಂದಿನ ಮಕ್ಕಳಿಗೆ ನಮ್ಮ ಜನಪದ ಆಟಗಳನ್ನೂ ತಿಳಿಸಿಕೊಡುವ ಅಗತ್ಯವಿದೆ. ಮುಂದಿನ ದಿನಗಳಲ್ಲಿ ಅಂತಹ ಆಟಗಳನ್ನೂ ಇಲ್ಲಿ ಪರಿಚಯಿಸುವಂತಾಗಲಿ. ಆಗ ಇಂತಹ ಕ್ರೀಡಾ ಕೂಟವು ಅರ್ಥಪೂರ್ಣವಾಗುತ್ತದೆ" ಎಂದು ಅವರು ವಿಜೇತ ತಂಡಗಳಿಗೆ ಬಹುಮಾನ ವಿತರಿಸಿ ಹೇಳಿದರು. ಬಹುಮಾನದ ಪ್ರಾಯೋಜಕರ ಪರವಾಗಿ ಶ್ರೀ ಸಿ.ಎಸ್.ರಾವ್ ಮಾತನಾಡಿ ಕ್ರೀಡಾಳುಗಳನ್ನು ಅಭಿನಂದಿಸಿದರು. ಸಂಘದ ಅಧ್ಯಕ್ಷ ಶ್ರೀ ಮಂಜುನಾಥ ಹೆಬ್ಬಾರ್, ಕೋಶಾಧಿಕಾರಿ ಶ್ರೀ ಗಣೇಶ್ ಹೆಬ್ಬಾರ್, ಶ್ರೀ ವೈ. ಭುವನೇಂದ್ರ ರಾವ್, ಜಯರಾಮ ರಾವ್, ಮೊದಲಾದವರು ವೇದಿಕೆಯಲ್ಲಿದ್ದರು. ಯುವ ವೇದಿಕೆಯ ಅಧ್ಯಕ್ಷ ಶ್ರೀ ಸಂತೋಷ್ ರಾವ್ ಚಿಟ್ಪಾಡಿ ಎಲ್ಲರನ್ನು ಸ್ವಾಗತಿಸಿದರು. ಕಾರ್ಯದರ್ಶಿ ಪ್ರಭಾಕರ ಭಂಡಿ ಧನ್ಯವಾದವಿತ್ತರು. ನಿರ್ದೇಶಕ ಕೃಷ್ಣಕುಮಾರ್ ರಾವ್ ಮಟ್ಟು ಕಾರ್ಯಕ್ರಮ ನಿರೂಪಣೆ ಮಾಡಿದ್ದರು.

**ಆಗಮಿಸಿದ್ದ ತಂಡಗಳು :** 1) ಜೆಸಿಟಿ ಬೆಂಗಳೂರು 2) ಯುನೈಟೆಡ್ ಬ್ರದರ್ ಕುಂದಾಪುರ 3) ಷಣ್ಮುಖ ಕ್ರಿಕೆಟರ್ ಸುರತ್ಕಲ್ 4) ರಾವ್ ಬ್ರದರ್ ಕಟಪಾಡಿ 5) ಫ್ರೆಂಡ್ ಸುಬ್ರಹ್ಮಣ್ಯ 6) ಶ್ರೀ ಶಂಕರ ಕ್ರಿಕೆಟರ್ ಕಾರ್ಕಳ. 7) ಶ್ರೀ ದುರ್ಗಾ ಕ್ರಿಕೆಟರ್ ಮಂದಾರ್ತಿ. 8) ಪಂಚಶ್ರೀ ಬಂಟ್ವಾಳ–2 9) ಸ್ಟ್ರೈಕರ್ ಕುಂದಾಪುರ 10) ಎಫ್‌ಡಬ್ಲ್ಯುಎಫ್ ಬೆಂಗಳೂರು. 11) ಸ್ಥಾನಿಕ ಕ್ರಿಕೆಟರ್ ಸುಳ್ಯ. 12) ಟೀಮ್ ಕಬ್ಬಿನಾಲೆ. 13) ಪಂಚಶ್ರೀ ಬಂಟ್ವಾಳ–1 14) ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು. 15) ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಪಡುಬಿದ್ರೆ. 16) ಸ್ಥಾನಿಕ ರೋಯಲ್ ಬೆಳಂಗಡಿ. 17) ಎಮ್‌ಸಿಬಿ ಬಾರ್ಕೂರು. 18) ನಂದಳಿಕೆ.

**ನಂದಳಿಕೆ ತಂಡಕ್ಕೆ ಶ್ರೀ ಶಾರದಾ ಟ್ರೋಫಿ–2022 :** 32ನೇ ವರ್ಷದ ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟವು ಸ್ಥಳೀಯ ಎಮ್‌ಜಿಎಮ್ ಕ್ರೀಡಾಂಗಣದಲ್ಲಿ ದಿನಾಂಕ 13–03–2022ರಂದು ನೆರವೇರಿತು. ಕೆಲವೊಂದು ತಾಂತ್ರಿಕ ಕಾರಣಗಳಿಂದ ಈ ಬಾರಿ ಏಕ ಕಾಲದಲ್ಲಿ ಎರಡು ಪಂದ್ಯಗಳನ್ನಷ್ಟೇ ನಡೆಸಲು ಸಾಧ್ಯವಾಯಿತು. ದೂರದ ಬೆಂಗಳೂರಿನ 2, ಬಂಟ್ವಾಳದ 2, ಬೆಳಂಗಡಿ, ಸುಳ್ಯ, ಸುಬ್ರಹ್ಮಣ್ಯ ಸೇರಿ ಒಟ್ಟು 18 ತಂಡಗಳು ಆಗಮಿಸಿದ್ದು, 6 ಓವರ್‌ಗಳ ಪಂದ್ಯಗಳನ್ನು ನಿಗದಿಪಡಿಸಲಾಯಿತು. ಅದಕ್ಕಾಗಿ ಬೆಳಿಗ್ಗೆ 8.30ಕ್ಕೆ ಮೊದಲ 2 ಪಂದ್ಯಗಳನ್ನು ಪ್ರಾರಂಭಿಸಲಾಯಿತು. ನಂತರ ಉದ್ಘಾಟನಾ ಸಮಾರಂಭ ನೆರವೇರಿತು. ಮುಂದಿನ ಪಂದ್ಯಗಳನ್ನು ಎಡೆಬಿಡದೆ ನಡೆಸಿ ಮಧ್ಯಾಹ್ನ ಊಟದ ವರೆಗೆ ಒಟ್ಟು 14 ಪಂದ್ಯಗಳನ್ನು ನಡೆಸಲಾಯಿತು. ಊಟದ ನಂತರ ಮೊದಲ ಸೆಮಿಫೈನಲ್‌ನಲ್ಲಿ ಸ್ಟ್ರೈಕರ್ಸ್ ಕುಂದಾಪುರ ತಂಡವು ಷಣ್ಮುಖ ಕ್ರಿಕೆಟರ್ ಸುರತ್ಕಲ್ ತಂಡವನ್ನೂ, 2ನೇ ಸೆಮಿಫೈನಲ್‌ನಲ್ಲಿ ನಂದಳಿಕೆ ತಂಡವು ಎಫ್‌ಡಬ್ಲ್ಯುಎಫ್ ಬೆಂಗಳೂರು ತಂಡವನ್ನೂ ಎದುರಿಸಿದವು. ಸಂಜೆ ನಡೆದ ಫೈನಲ್ ಹೋರಾಟದಲ್ಲಿ ಸ್ಟ್ರೈಕರ್ ಕುಂದಾಪುರ ತಂಡವನ್ನು ಸೋಲಿಸಿದ ನಂದಳಿಕೆ ತಂಡವು ಸತತ ಎರಡನೇ ಬಾರಿಯೂ ಶ್ರೀ ಶಾರದಾ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು. ನಂತರ ಸಮಾರೋಪ ಹಾಗೂ ಬಹುಮಾನ ವಿತರಣಾ ಕಾರ್ಯಕ್ರಮವು ನೆರವೇರಿತು.

**ಪಂದ್ಯದಲ್ಲಿ ಭಾಗವಹಿಸಿದ್ದ ನಿರ್ಲಿಪ್ತ ತೀರ್ಪುಗಾರರು ಕ್ಲಪ್ತ ಸಮಯದಲ್ಲೇ ಪಂದ್ಯಗಳನ್ನು ನೆರವೇರಿಸಿಕೊಟ್ಟರು. ಶ್ರೀ ಪ್ರಕಾಶ್ ರಾವ್ ಕೋಲ್ಪೆ, ಶ್ರೀ ಆದರ್ಶ್‌ರಾವ್, ಶ್ರೀ ವಸಂತ್ ರಾವ್ ಕರಂಬಳ್ಳಿ, ಶ್ರೀ ಸುದರ್ಶನ್ ರಾವ್ ಕಾಪು, ಶ್ರೀ ಕೃಷ್ಣಾನಂದ ರಾವ್ ಉಂಡಾರು, ಶ್ರೀ ಕೃಷ್ಣಮೂರ್ತಿ ಬ್ರಹ್ಮಾವರ, ಶ್ರೀ ಅಭ್ಯುದಯ ಕುಮಾರ್ ಮೊದಲಾದವರು ಎಲ್ಲಾ ಪಂದ್ಯಗಳ ಸ್ಕೋರರ್‌ಗಳಾಗಿ ಸಹಕರಿಸಿದರು. ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು, ಶ್ರೀ ವಿಶ್ವನಾಥ್ ಶ್ಯಾನುಭಾಗ್, ಶ್ರೀ ಪ್ರಭಾಕರ ಭಂಡಿ, ಶ್ರೀ ವಿನೋದ್ ಕುಮಾರ್ ಮೊದಲಾದವರು ಪಂದ್ಯಗಳ ಮೇಲ್ವಿಚಾರಕರಾಗಿ ಎಲ್ಲಾ ಪಂದ್ಯಗಳನ್ನು ವ್ಯವಸ್ಥಿತವಾಗಿ ಹಾಗೂ ಸಮಯಕ್ಕೆ ಸರಿಯಾಗಿ ನಡೆಯುವಂತೆ ನೋಡಿಕೊಂಡರು.**

**ಭಾಗವಹಿಸಿದ್ದ ನಿರ್ಲಿಪ್ತ ತೀರ್ಪುಗಾರರು :** ಶ್ರೀ ಪ್ರವೀಣ್ ಮೊಳೂರು, ಶ್ರೀ ಶಶಿಕಿರಣ್ ಕುಂಜಾರುಗಿರಿ, ಶ್ರೀ ಕಿರಣ್ ಒಳಕಾಡು, ಶ್ರೀ ಸದಾಶಿವ ಮಣಿಪಾಲ, ಶ್ರೀ ಪ್ರತೀಕ್ ಮಣಿಪಾಲ, ಶ್ರೀ ಸಂಪತ್ ಉಡುಪಿ, ಶ್ರೀ ಯಶವಂತ್ ಉಡುಪಿ, ಶ್ರೀ ವಿಜಯ್ ಶಿರ್ವ ಮೊದಲಾದವರು ಭಾಗವಹಿಸಿದ್ದರು.

**ಶ್ರೀ ಶಾರದಾ ಟ್ರೋಫಿ–2022ರ ಬಹುಮಾನಿತರ ಪಟ್ಟಿ :** ವಿನ್ನರ್ – ನಂದಳಿಕೆ ತಂಡ, ರನ್ನರ್ – ಸ್ಟ್ರೈಕರ್ ಕುಂದಾಪುರ, ಸೆಮಿ ಫೈನಲ್ ಲೂಸರ್– 1. ಷಣ್ಮುಖ ಕ್ರಿಕೆಟರ್ ಸುರತ್ಕಲ್ 2. ಎಫ್‌ಡಬ್ಲ್ಯುಎಫ್ ಬೆಂಗಳೂರು. ಅತ್ಯುತ್ತಮ ದಾಂಡಿಗ : ಕಿರಣ್ ( ಎಫ್‌ಡಬ್ಲ್ಯುಎಫ್ ಬೆಂಗಳೂರು), ಅತ್ಯುತ್ತಮ ಬೌಲರ್: ತೇಜಸ್ (ಸ್ಟ್ರೈಕರ್ ಕುಂದಾಪುರ), ಆಲ್ ರೌಂಡರ್ : ವಿಕ್ರಂ (ನಂದಳಿಕೆ ತಂಡ), ಹ್ಯಾಟ್ರಿಕ್ ಸಿಕರ್ ವಿನ್ನರ್ : ಆದರ್ಶ್ (ಫ್ರೆಂಡ್ ಸುಬ್ರಹ್ಮಣ್ಯ) ಪ್ರತಿ ವರ್ಷದಂತೆ ಈ ವರ್ಷವೂ 10ನೇ ತರಗತಿಯ ವರೆಗಿನ ವಿದ್ಯಾರ್ಥಿಗಳಿಗಾಗಿ ಕ್ರಿಕೆಟ್ ಪಂದ್ಯಾಟವನ್ನೂ ನಡೆಸಲಾಯಿತು. ಇದ್ದ ವಿದ್ಯಾರ್ಥಿಗಳನ್ನು ತಂಡಗಳಾಗಿ ವಿಭಾಗಿಸಿ ವ್ಯವಸ್ಥಿತ ರೀತಿಯಲ್ಲಿ ಪಂದ್ಯಾಟ ನೆರವೇರಿತು. ಪಂದ್ಯಗಳ ಮೇಲ್ವಿಚಾರಕರಾಗಿ ಶ್ರೀ ವಸಂತ್ ರಾವ್ ಕರಂಬಳ್ಳಿ ಹಾಗೂ ತೀರ್ಪುಗಾರರಾಗಿ ಶ್ರೀ ಕೃಷ್ಣರಾವ್ ಕರಂದಾಡಿ ಸಹಕರಿಸಿದರು.

**ಜೂನಿಯರ್ ಕ್ರಿಕೆಟರ್ ಬಹುಮಾನಿತರು :** ಪ್ರಥಮ ಬಹುಮಾನ–ಬಿ. ತಂಡ, ದ್ವಿತೀಯ ಬಹುಮಾನ–ಎ ತಂಡ.

ಈ ವರ್ಷ ನೂತನವಾಗಿ ಪ್ರಾರಂಭಿಸಲಟ್ಟ ಮಹಿಳೆಯರ ತ್ರೋಬಾಲ್ ಪಂದ್ಯವು ಎಮ್‌ಜಿಎಮ್ ಕ್ರೀಡಾಂಗಣದಲ್ಲಿ ನೆರವೇರಿತು. ಮಧ್ಯಾಹ್ನ ಊಟದ ನಂತರ ನಡೆದ ಈ ತ್ರೋಬಾಲ್ ಪಂದ್ಯದಲ್ಲಿ ಬಾರ್ಕೂರು, ಉಡುಪಿ ಎ, ಉಡುಪಿ ಬಿ, ಜೆಸಿಟಿ ಬೆಂಗಳೂರು, ಮಂದಾರ್ತಿ ಒಟ್ಟು 5 ತಂಡಗಳು ಪರಸ್ಪರ ಆಟವಾಡಿ ಸಂಜೆ ನಡೆದ ಫೈನಲ್ ಪಂದ್ಯದಲ್ಲಿ ಬಾರ್ಕೂರು ತಂಡವು ವಿನ್ನರ್ಸ್ ಆಗಿ ಪ್ರಶಸ್ತಿಯನ್ನು ಎತ್ತಿಕೊಂಡಿತು. ಈ ಪಂದ್ಯಗಳ ನಿರ್ಲಿಪ್ತ ತೀರ್ಪುಗಾರರಾಗಿ ಕೊಕ್ಕರ್ಣೆಯ ಕು। ಶಕುಂತಳಾ ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

**ತ್ರೋಬಾಲ್ ಪಂದ್ಯದ ಬಹುಮಾನಿತರು :** ವಿನ್ನರ್–ಬಾರ್ಕೂರು ತಂಡ, ರನ್ನರ್–ಉಡುಪಿ ಎ, ಬೆಸ್ಟ್ ಆಲ್ ರೌಂಡರ್–ಪೂರ್ಣಿಮಾ (ಬಾರ್ಕೂರು ತಂಡ)

**ಆತಿಥ್ಯ–ಊಟೋಪಚಾರ :** ಬೆಳಗಿನ ಉಪಾಹಾರವು 8 ಗಂಟೆಯಿಂದಲೇ ಪ್ರಾರಂಭಗೊಂಡಿತು. ಶ್ರೀ ಶಾರದಾ ಮಂಟಪದಲ್ಲಿ ಮಹಿಳೆಯರು ಮತ್ತು ಮಕ್ಕಳು ಉಪಾಹಾರ ಸೇವಿಸಿದರೆ ಕ್ರಿಕೆಟ್ ಕ್ರೀಡಾಳುಗಳು ಹಾಗೂ ಸಮಾಜ ಬಾಂಧವರಿಗಾಗಿ ಎಂಜಿಎಂ ಕ್ರೀಡಾಂಗಣದಲ್ಲಿಯೇ ವ್ಯವಸ್ಥೆ ಮಾಡಲಾಗಿತ್ತು. ಬಿಸಿ ಬಿಸಿ ದೋಸೆ, ಉಪ್ಪಿಟ್ಟು ಚಹಾ, ಕಾಫಿಯೊಂದಿಗೆ ಸಿದ್ಧವಾಗಿತ್ತು. ಇದಲ್ಲದೆ ಶ್ರೀ ಮಂಜುನಾಥ ಹೆಬ್ಬಾರ್ ಮತ್ತು ಶ್ರೀ ಗಣೇಶ್ ಹೆಬ್ಬಾರ್ ಪ್ರಾಯೋಜಕತ್ವದಲ್ಲಿ ಕ್ರೀಡಾಂಗಣದಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ತಂಪು ಪಾನೀಯವಾಗಿ ಸೋಡಾ ಶರಬತ್ತು ಎಲ್ಲರ ಮನ ತಣಿಸಿತು. ಮಧ್ಯಾಹ್ನ ಊಟಕ್ಕೆ ಚಪಾತಿ– ಕೂರ್ಮ, ಅನ್ನ, ಸಾರು, ಗುಳ್ಳಹುಳಿ, ಪಾಯಸ, ಮಜ್ಜಿಗೆ, ಮುಖ್ಯ ವ್ಯಂಜನಗಳಾಗಿದ್ದು, ಎಲ್ಲರೂ ಊಟದ ವ್ಯವಸ್ಥೆಗೆ ತಲೆದೂಗಿದರು. ಸಂಜೆ ಮತ್ತೆ ಕ್ರೀಡಾಂಗಣದಲ್ಲಿ "ಹೈಟೀ"ಗಾಗಿ ಬಿಸಿ ಬಿಸಿ ಗೋಳಿಬಜೆಯೂ ಸಿದ್ಧಗೊಂಡಿತು. ಕ್ರೀಡಾಂಗಣದಲ್ಲಿ ತಿಂಡಿ–ಉಪಾಹಾರದ ಮೇಲ್ವಿಚಾರಣೆಯನ್ನು ಜಗದೀಶ್ ರಾವ್ ಟಿ, ದಿವಾಕರ್ ರಾವ್ ಚೊಕ್ಕಾಡಿ, ಅಜಿತ್ ರಾವ್, ನಾಗಭೂಷಣ್ ಮೊದಲಾದವರು ವ್ಯವಸ್ಥಿತವಾಗಿ ನೆರವೇರಿಸಿಕೊಟ್ಟರು. ಒಟ್ಟಿನಲ್ಲಿ ಆಗಮಿಸಿದ್ದ ಎಲ್ಲರೂ ಅಂದಿನ ಅತಿಥಿ ಸತ್ಕಾರಕ್ಕಾಗಿ ಬಹಳಷ್ಟು ಪ್ರಶಂಸೆ ಮಾಡಿದ್ದರು.

ವಿಶೇಷವಾಗಿ ಈ ವರ್ಷ ಆಗಮಿಸಿದ್ದ ತಂಡಗಳ ಸದಸ್ಯರಿಗೆ, ಆಹ್ವಾನಿಸಿದ್ದ ಅತಿಥಿಗಳಿಗೆ, ಆಗಮಿಸಿದ್ದ ಸಮಾಜ ಬಾಂಧವರಿಗೆ, ಮಹಿಳೆಯರಿಗೆ ತೀರ್ಪುಗಾರರಿಗೆ ಎಲ್ಲರಿಗೂ ಬಾಳೆಯ ಗಿಡಗಳನ್ನು ನೀಡುವ ಮೂಲಕ ಪರಿಸರ ಪ್ರಜ್ಞೆ, ಹಾಗೂ ವೃಕ್ಷ ಪ್ರೇಮ ಬೆಳೆಯುವಂತೆ ಮಾಡಲಾಯಿತು. ಸಂಘದ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿಯವರ ಮಾಲಕತ್ವದ ರಾಮನ್ ಲ್ಯಾಬ್ ಉಡುಪಿ ಇವರ ಪ್ರಾಯೋಜಕತ್ವದಲ್ಲಿ ಹೆಬ್ರಿ ಫಾರ್ಮ್ ನಿಂದ ತರಿಸಲಾದ ರಸಬಾಳೆ, ಕೆವೆಂಡಿಸ್ ಮತ್ತು ಕದಳಿ ಬಾಳೆಗಿಡಗಳನ್ನು ಎಲ್ಲರಿಗೂ ಹಂಚುವ ಮೂಲಕ ಬಾಳೆ ಗಿಡ ಎಲ್ಲರ ಮನೆಯಲ್ಲಿ ಬೆಳೆಸುವಂತೆ ಪ್ರೇರೇಪಿಸಲಾಯಿತು.

**ಕೃತಜ್ಞತಾರ್ಪಣೆ :** ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ ಹಾಗೂ ಒಳಾಂಗಣ ಕ್ರೀಡಾ ಕಾರ್ಯಕ್ರಮಗಳಲ್ಲಿ ಆಗಮಿಸಿದ್ದ ಎಲ್ಲ ಕ್ರೀಡಾಳುಗಳಿಗೆ, ಬಹುಮಾನಗಳ ಪ್ರಾಯೋಜಕರಿಗೆ, ನಾವು ಆಹ್ವಾನಿಸಿದಂತೆ ಆಗಮಿಸಿದ್ದ ಅತಿಥಿ ಗಣ್ಯರಿಗೆ, ಧನಸಹಾಯ ನೀಡಿ ಸಹಕರಿಸಿದ ದಾನಿಗಳಿಗೆ, ಬ್ಯಾನರ್ ಒದಗಿಸಿದ ಸಂಘ ಸಂಸ್ಥೆಗಳಿಗೆ, ಪಂದ್ಯಗಳನ್ನು ವ್ಯವಸ್ಥಿತವಾಗಿ ನಡೆಸಿಕೊಟ್ಟ ನಿರ್ಲಿಪ್ತ ತೀರ್ಪುಗಾರರಿಗೆ, ಆಗಮಿಸಿದ್ದ ನಮ್ಮ ಸಮಾಜದ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಮತ್ತು ಸದಸ್ಯರಿಗೆ, ಕ್ರೀಡಾ ಕಾರ್ಯಕ್ರಮದ ಯಶಸ್ಸಿಗಾಗಿ ದುಡಿದ ನಮ್ಮ ಸಮಾಜದ ಬಂಧುಗಳಿಗೆ, ಸಂಘದ ಮ್ಯಾನೇಜರ್ ದ್ವಯರಿಗೆ, ಪ್ರತ್ಯಕ್ಷ ಮತ್ತು ಪರೋಕ್ಷ ಸಹಕರಿಸಿದ ಎಲ್ಲರಿಗೂ ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದ ಆಡಳಿತ ಮಂಡಳಿಯು ಅನಂತ ಕೃತಜ್ಞತೆ ಸಲ್ಲಿಸುತ್ತದೆ.

**ಪ್ರಾಯೋಜಕರು :**
* ಅಲೆವೂರು ಶ್ಯಾಮರಾವ್, ನಿವೃತ್ತ ಸಿಂಡಿಕೇಟ್ ಬ್ಯಾಂಕ್ ಅಧಿಕಾರಿ
* ಶ್ರೀಮತಿ ಸುನಂದ ಹಾಗೂ ಶ್ರೀ ಸಿ ಎಸ್ ರಾವ್ ಚಿಟ್ಪಾಡಿ,
* ಶ್ರೀ ವೈ ಭುವನೇಂದ್ರ ರಾವ್, ಉಡುಪಿ
* ಶ್ರೀ ಬಿ ಜಯರಾಮ್ ರಾವ್ ಉಡುಪಿ
* ಶ್ರೀಮತಿ ಸುಕನ್ಯಾ ಮತ್ತು ಶ್ರೀ ಪಿ. ಸತೀಶ್ ರಾವ್ ಚಿಟ್ಪಾಡಿ
* ಪತಂಜಲಿ ಆರೋಗ್ಯ ಕೇಂದ್ರ ಚಿಟ್ಪಾಡಿ
* ಶ್ರೀ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ, ಉಡುಪಿ
* ರಾಮನ್ ಲ್ಯಾಬ್ ಇಕ್ವಿಪ್‌ಮೆಂಟ್ಸ್ ಆ್ಯಂಡ್ ಕೆಮಿಕಲ್ಸ್, ಉಡುಪಿ.
* ಶ್ರೀ ಮಂಜುನಾಥ್ ಹೆಬ್ಬಾರ್ ಮತ್ತು ಶ್ರೀ ಗಣೇಶ್ ಹೆಬ್ಬಾರ್ ಉಡುಪಿ

## ಮಹಿಳಾ ವೇದಿಕೆ : ಒಳಾಂಗಣ ಕ್ರೀಡೆಗಳು

ಬೆಳಿಗ್ಗೆ 10.00 ಗಂಟೆಗೆ ಮಹಿಳಾ ವಿಭಾಗದ ಅಧ್ಯಕ್ಷೆ ಡಾ. ವಿಜಯಾ ವೈ.ಬಿ. ಹಾಗೂ ಸ್ಥಾನಿಕ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್‌ರವರು ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಚಿಕ್ಕ ಮಕ್ಕಳಿಂದ 80 ವರ್ಷ ವಯಸ್ಸಿನ ಮಹಿಳೆಯರು ವಿವಿಧ ಒಳಾಂಗಣ ಸ್ಪರ್ಧೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಮಧ್ಯಾಹ್ನದ ಭೋಜನದ ನಂತರ ಬಹುಮಾನ ವಿತರಣಾ ಕಾರ್ಯಕ್ರಮ ನಡೆಯಿತು. ಶ್ರೀಮತಿ ರಜನಿ ಹೆಬ್ಬಾರ್ ಎಲ್ಲರನ್ನೂ ಸ್ವಾಗತಿಸಿದರು. ಮುಖ್ಯ ಅತಿಥಿಯಾಗಿ ಶ್ರೀಮತಿ (ಡಾ॥) ರಮ್ಯಾ ಎಸ್. ಅಸೋಸಿಯೇಟ್ ಪ್ರೊಫೇಸರ್. ಎಂ.ಐ.ಟಿ. ಮಣಿಪಾಲ ಇವರು ವಿಜೇತರಿಗೆ ಬಹುಮಾನಗಳನ್ನು ವಿತರಿಸಿ, ಸಭೆಯನ್ನುದ್ದೇಶಿಸಿ ನಾಲ್ಕು ಹಿತವಚನಗಳನ್ನು ನುಡಿದರು. ಮೀರಾ ಆರ್.ರಾವ್, ಸಂಧ್ಯಾ ರಾವ್, ಪ್ರೀತಿಮಾಲಾ, ಜ್ಯೋತಿನವೀನ್ ರವರು ಒಟ್ಟಾರೆ ಕಾರ್ಯಕ್ರಮವು ಸುಸೂತ್ರವಾಗಿ ನಡೆಯುವಲ್ಲಿ ಸಹಕರಿಸಿದರು. ನಂತರ ಸಭೆಯು ಎಂ.ಜಿ.ಎಂ.

■...1ನೇ ಪುಟದಿಂದ

ಕಾಲೇಜು ಆಟದ ಮೈದಾನದಲ್ಲಿ ಸ್ಥಾನಿಕ ಸಂಘದ ಇತಿಹಾಸದಲ್ಲಿ ಮೊದಲಬಾರಿಗೆ ಅಂತರ್ ಸಂಘ ಮಹಿಳಾ ಥ್ರೋ ಬಾಲ್ ಪಂದ್ಯಾವಳಿಯು ಜರುಗಿತು. ಟೀಂಗಳು 1. ಉಡುಪಿ 'ಎ' ತಂಡ ಕ್ಯಾಪ್ಟನ್ ವಿದ್ಯಾ ಎಸ್. ರಾವ್ 2. ಉಡುಪಿ 'ಬಿ' ತಂಡ ಕ್ಯಾಪ್ಟನ್ ಡಾ.ವಿಜಯಾ ವೈ.ಬಿ. 3. ಬಾರ್ಕೂರು ತಂಡ ಕ್ಯಾಪ್ಟನ್ ಪೂರ್ಣಿಮಾ ರಾವ್ 4. ಮಂದಾರ್ತಿ ತಂಡ ಕ್ಯಾಪ್ಟನ್ ಶ್ರುತಿ ರಾವ್ 5. ಬೆಂಗಳೂರು ತಂಡ ಕ್ಯಾಪ್ಟನ್ ರಮ್ಯ ಪ್ರೇಕ್ಷಕರ ಅಪಾರ ಉತ್ತೇಜನದೊಂದಿಗೆ ರೋಚಕ ಥ್ರೋಬಾಲ್ ಪಂದ್ಯಾಟಗಳು ನಡೆದು, ಬಾರ್ಕೂರು ತಂಡದ ಮಹಿಳೆಯರು ಟ್ರೋಫಿಯ ವಿಜೇತರಾದರು. ಉಡುಪಿ 'ಎ' ತಂಡದವರು ಎರಡನೇ ಸ್ಥಾನಗಳಿಸಿದರು. ವಿಜೇತರಿಗೆ ಶ್ರೀಮತಿಸುಕನ್ಯಾ ಮತ್ತು ಶ್ರೀ ಪಿ.ಸತೀಶ್ ರಾವ್ ದಂಪತಿಗಳು ನಗದು ಬಹುಮಾನವನ್ನು ವಿತರಿಸಿ ಶುಭಾಶಯ ಕೋರಿದರು. ಕ್ರಿಕೆಟ್ ಹಾಗೂ ಥ್ರೋಬಾಲ್ ಪಂದ್ಯದ ವಿಜೇತರಿಗೆ ಬಾಳೆಸಸಿಗಳನ್ನು ನೆನಪಿನ ಕಾಣಿಕೆಯಾಗಿ ನೀಡಲಾಯಿತು.

### ಮಹಿಳಾ ವೇದಿಕೆ ವತಿಯಿಂದ ಜರಗಿದ ಒಳಾಂಗಣ ಕ್ರೀಡಾಕೂಟದ ವಿಜೇತರು

- **ಮೂರು ವರ್ಷದ ಒಳಗಿನ ಮಕ್ಕಳ ಬಲೂನು ಹೆಕ್ಕುವ ಸ್ಪರ್ಧೆಯಲ್ಲಿ ಇದ್ದವರು**
  ಪಂಚಮಿ, ಮೇಧ, ಅಚಿಂತ್ಯ
- **ಎಲ್.ಕೆ.ಜಿ.–ಯು.ಕೆ.ಜಿ. ಒಳಗಿನ ಮಕ್ಕಳ ಸ್ಪರ್ಧೆಯಲ್ಲಿ ಇದ್ದವರ ಹೆಸರು**
  ಅಭಿಜ್ಞ ಹೆಬ್ಬಾರ್, ಆರಾಧ್ಯ, ಚೈತನ್ಯ, ವಿಹಾರ್ ರಾವ್, ಸನ್ನಿಧಿ, ಅಲೋಕ, ಪ್ರಣವ್ ರಾವ್, ಅಚಿಂತ್ಯ
- **1 ರಿಂದ 3 ನೇ ತರಗತಿ ಮಕ್ಕಳಿಗೆ ನಡೆದ ಸ್ಪರ್ಧೆಯಲ್ಲಿ ಬಹುಮಾನ ವಿಜೇತರು**
  ಶ್ರೇಯಸ್– I, ತನ್ವಿ– II
- **4 ರಿಂದ 6ನೇ ತರಗತಿವರೆಗಿನ ಮಕ್ಕಳಿಗಾಗಿ ನಡೆದ ಸ್ಪರ್ಧೆಯಲ್ಲಿ ಬಹುಮಾನ ವಿಜೇತರು**
  ಸಾನ್ವಿ ರಾವ್ ಕೆ.ಹೆಚ್.– I, ಪರ್ಜನ್ಯ ಕೆ. ರಾವ್-II
- **7 ರಿಂದ 9 ನೇ ತರಗತಿವರೆಗಿನ ಮಕ್ಕಳಿಗಾಗಿ ನಡೆದ ಸ್ಪರ್ಧೆಯ ಬಹುಮಾನಗಳು**
  ಆದಿತ್ಯ ರಾವ್– I, ಸುಜನ ಹರೀಶ್ ರಾವ್– II
- **10 ರಿಂದ 12 ನೇ ತರಗತಿಯ ಮಕ್ಕಳಿಗೆ ನಡೆದ ಸ್ಪರ್ಧೆಯ ಬಹುಮಾನ ವಿಜೇತರು**
  ರವೀಶ–I, ಸದನ ಹೆಚ್. ರಾವ್–II
- **ಮಹಿಳೆಯರಿಗೆ ನಡೆದ ಸ್ಪರ್ಧೆಯ ವಿಜೇತರು**
  ರೂಪಾ ರಾವ್– I, ರಕ್ಷಿತ–II
- **60 ರ ಮೇಲ್ಪಟ್ಟ ಮಹಿಳೆಯರಿಗಾಗಿ ನಡೆದ ಸ್ಪರ್ಧೆಯ ಬಹುಮಾನ ವಿಜೇತರು**
  ಪ್ರಸನ್ನ ರಾವ್– I, ಜ್ಯೋತಿ ರಾವ್-II

## ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣರ ಸಂಘದ ವಾರ್ಷಿಕೋತ್ಸವ



ಮಟ್ಟಿಕಟ್ಟೆ ಶ್ರೀ ಮಹಾಗಣಪತಿ ದೇವಸ್ಥಾನ ನಾಯ್ಕನಕಟ್ಟೆ ಕೆರ್ಗಾಲ್‌ನಲ್ಲಿ ಭಾನುವಾರ ನಡೆದ ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣರ ಸಂಘದ (ರಿ.) 27ನೇ ವಾರ್ಷಿಕೋತ್ಸವದಲ್ಲಿ ಅಧ್ಯಕ್ಷರಾದ ಎಮ್. ಸತ್ಯನಾರಾಯಣ ಹೆಬ್ಬಾರ್ ಮಾತನಾಡಿ ಸಂಘದ ಸದಸ್ಯರೆಲ್ಲರೂ ಪರಸ್ಪರ ಸಹಕರಿಸಿದಾಗ ಮಾತ್ರ ಉತ್ತಮ ರೀತಿ ಸಂಘಟನೆ ಬೆಳೆಯಲು ಸಾಧ್ಯ ಎಂಬುದಾಗಿ ತಿಳಿಸಿದರು.


ಆನಂದ ರಾವ್ ಹೊಸ್ಕೋಟೆ ಕಾರ್ಯಕ್ರಮ ಉದ್ಘಾಟಿಸಿ ಶುಭ ಹಾರೈಸಿದರು. 2021 ನೇ ಸಾಲಿನ ರಾಜ್ಯಮಟ್ಟದ ಪ್ರಶಸ್ತಿ ಪಡೆದವರ ಸನ್ಮಾನದಲ್ಲಿ ಎಮ್. ಸತ್ಯನಾರಾಯಣ ಹೆಬ್ಬಾರ್ ಮರೂರು. ಕೃಷ್ಣಮೂರ್ತಿ, ಪಿ.ಕೆ ಕೋಟೇಶ್ವರ, ಉಷಾ ಶೀಧರ ಹೆಬ್ಬಾರ್, ಅಲ್ಬಾಡಿ, ಮಂಜುನಾಥ ಹೆಬ್ಬಾರ್ ಇವರುಗಳನ್ನು ಸನ್ಮಾನಿಸಲಾಯಿತು. ಅಲ್ಲದೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ನಾಗರತ್ನ ಹೆಬ್ಬಾರ್ ಅಬ್ಲಾಕಟ್ಟೆ, ಸೂರಾಲು ಶ್ರೀ ಗುರುಪ್ರಸಾದ ರಾವ್ ಕಮಲಶಿಲೆ, ವಿಜಯ ಎಸ್.ರಾವ್ ಹೆರಂಜಾಲು, ಲೋಕೇಶ ಶ್ಯಾನುಬೋಗ್ ಇವರುಗಳನ್ನು ಸನ್ಮಾನಿಸಲಾಯಿತು. ಉದಯಕುಮಾರ್ ಹೆಬ್ಬಾರ್ ಮ್ಯಾನೇಜಿಂಗ್ ಡೈರೆಕ್ಟರ್ ಕ್ರೆಡಿಟ್ ಗ್ರಾಮೀಣ ಲಿ. ಬೆಂಗಳೂರು ಇವರು ಕೊಡ ಮಾಡಿದ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು. ಉಮೇಶ ಶ್ಯಾನುಭೋಗ್, ಮೂಕಾಂಬಿಕಾ ಟಿಂಬರ್ಸ್ & ಮೂಕಾಂಬಿಕಾ ವುಡ್ ಇಂಡಸ್ಟ್ರೀಸ್ ಕಿರಿಮಂಜೇಶ್ವರ ಇವರ ಕೊಡ ಮಾಡಿದ ಪ್ರತಿಭಾಪುರಸ್ಕಾರವನ್ನು ವಿತರಿಸಲಾಯಿತು. 25 ವರ್ಷ ವೈವಾಹಿಕ ಜೀವನ ಪೂರೈಸಿದ ಮೂವರು ದಂಪತಿಗಳನ್ನು ಜಗದೀಶ ರಾವ್ ಹೊಸ್ಕೋಟೆ, ರಮಾನಂದ ಹೆಗ್ಗಡೆ ಇಳಲಿ, ಹೆಚ್.ಎನ್ ಸುರೇಶ ದಂಪತಿಗಳನ್ನ ಸಾಂಪ್ರದಾಯಿಕವಾಗಿ ಗೌರವಿಸಲಾಯಿತು. ಮುಖ್ಯಅತಿಥಿಗಳಾಗಿ ಡಾ। ಸತ್ಯನಾರಾಯಣ ರಾವ್ ವೈದ್ಯಾಧಿಕಾರಿಗಳು ಸರ್ಕಾರಿ ಚಿಕಿತ್ಸಾಲಯ ನಾರ್ವೆ ಕೊಪ್ಪ ಇವರು ಮಾತನಾಡಿ ನಮ್ಮ ಸಂಪಾದನೆಯಲ್ಲಿ ಸ್ವಲ್ಪವನ್ನಾದರು ಸಮಾಜಕ್ಕೆ ದಾನಮಾಡಬೇಕು ಎಂದು ತಿಳಿಸಿದರು. ನಾನು ಕೂಡ ಸಂಘಕ್ಕೆ ಮುಂದಿನ ದಿನಗಳಲ್ಲಿ ನೆರವನ್ನು ನೀಡುತ್ತೇನೆಂದು ತಿಳಿಸಿದರು. ಕಾರ್ಯಕ್ರಮದ ಮೊದಲು ಸುಮಾರು 2 ಗಂಟೆಗಳ ಕಾಲ ಸಂಗೀತ, ಭರತನಾಟ್ಯ, ಭಜನೆ ಇತ್ಯಾದಿಗಳು ಸಂಘದ ಸದಸ್ಯರಿಂದ ಏರ್ಪಡಿಸಲಾಯಿತು. ಆತಿಥ್ಯ ವಹಿಸಿದ್ದ ಕೃಷ್ಣ ಗೋಪಾಲ ಹೆಬ್ಬಾರ್, ಆನಂದರಾವ್ ಹೊಸ್ಕೋಟೆ, ಗಣೇಶ ಹೆಬ್ಬಾರ ಕುಂಭಾಸಿ ಇವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು.

ಅದೇ ವೇದಿಕೆಯಲ್ಲಿ ನಾಗರತ್ನ ಹೆಬ್ಬಾರ್ ಅಬ್ಲಕಟ್ಟೆ ಇವರು ಬರೆದ “ನಗುವಿನ ಸಂಚಿ” ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು.

ಸುಮಾ ಅರುಣ್ ಶ್ಯಾನುಭೋಗ್ ಮತ್ತು ವಾಣಿ ಜಗದೀಶ ರಾವ್ ಪ್ರಾರ್ಥಿಸಿದರು. ಲಕ್ಷ್ಮೀನಾರಾಯಣ ರಾವ್ ಸ್ವಾಗತಿಸಿದರು. ವೇದಿಕೆಯಲ್ಲಿ ಮಹಿಳಾ ಸಂಘದ ಗೌರವಾಧ್ಯಕ್ಷರಾದ ಪುಷ್ಪಲತಾ ಶ್ಯಾನುಭೋಗ್, ಕೃಷ್ಣಗೋಪಾಲ ಹೆಬ್ಬಾರ್ ಹಾಗೂ ಮಹಿಳಾ ಸಂಘದ ಅಧ್ಯಕ್ಷರಾದ ವಾಣಿ ಸುಭಾಶ್ಚಂದ್ರ ಬಳ್ಳೂರು ಉಪಸ್ಥಿತರಿದ್ದರು. ಕಾರ್ಯದರ್ಶಿಗಳಾದ ಸುಭಾಶ್ಚಂದ್ರ ಬಳ್ಳೂರು ವರದಿ ವಾಚಿಸಿದರು. ಅರುಣ ಕುಮಾರ್ ಶ್ಯಾನುಭೋಗ್ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಸಭಾ ಕಾರ್ಯಕ್ರಮವನ್ನು ಸುಬ್ರಹ್ಮಣ್ಯ ರಾವ್ ಇವರು ನಿರೂಪಿಸಿದರು. ಜಗದೀಶ ರಾವ್ ಹೊಸ್ಕೋಟೆ, ಪ್ರಕಾಶ್ ರಾವ್ ಬೈಂದೂರು, ಜಯಪ್ರಕಾಶ ಉಳ್ಳೂರು, ಸರೋಜ ಮರವಂತೆ ಸನ್ಮಾನಿತರ ಪರಿಚಯ ಮಾಡಿದರು. ಸ್ಮಿತಾ ಪ್ರಸಾದ ಮತ್ತು ಪೂರ್ಣಿಮಾ ಕಾರಬೈಲ್ ಸಹಕರಿಸಿದರು. ಶ್ರೀ ದಯಾನಂದ ರಾವ್, ಶ್ರೀ ಶಂಕರನಾರಾಯಣ ಇವರು ಧನ್ಯವಾದ ಸಲ್ಲಿಸಿದರು.

ವರದಿ : ಶ್ರೀ ಜಗದೀಶ ರಾವ್ ಹೊಸ್ಕೋಟೆ


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**



**ಫೋನ್ : 2556536 (R), 2555466 (O), Mobile : 9845149521**

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ.: ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



## ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು, ಪಡುಬಿದ್ರಿ

ಇದೇ ಬರುವ ತಾ. 14.05.2022 ನೇ ಶನಿವಾರ ಶ್ರೀ ದೇವಳದಲ್ಲಿ

**ನರಸಿಂಹ ಜಯಂತಿ ಮಹೋತ್ಸವ**

ಶ್ರೀ ಕ್ಷೇತ್ರದ ತಂತ್ರಿಯವರಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಜರುಗಲಿದೆ. ದೇವರಿಗೆ ಕಲಶಾಭಿಷೇಕ, ಮಧ್ಯಾಹ್ನ ಮಹಾಪೂಜೆ, ಅನ್ನಸಂತರ್ಪಣೆ ನಡೆಯಲಿದೆ. ಸಂಜೆ ರಂಗಪೂಜೆ, ಪ್ರಸಾದವಿತರಣೆ ನೆರವೇರಲಿರುವುದು.

ಬೆಳಿಗ್ಗೆ ಗಂಟೆ 10.00 ಕ್ಕೆ ವಿಷ್ಣು ಸಹಸ್ರನಾಮ ಪಾರಾಯಣ, ಗಂಟೆ 10.30 ರಿಂದ ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಪಡುಬಿದ್ರಿ ಇದರ ಮಹಿಳಾ ವೇದಿಕೆಯವರಿಂದ ಹಾಗೂ ಗಂಟೆ 11.30 ರಿಂದ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಕುಂಜಿಬೆಟ್ಟು, ಉಡುಪಿ ಇದರ ಮಹಿಳಾ ವಿಭಾಗದವರಿಂದ ಭಜನಾ ಕಾರ್ಯಕ್ರಮ.

### ವಸಂತ ಋತುವಿನ ಕಾರ್ಯಕ್ರಮಗಳು

**ತಾ.17.04.2022, ಆದಿತ್ಯವಾರ ಅಪರಾಹ್ನ 3.30 ಗಂಟೆಗೆ**

**ದಕ್ಷಿಣಮ್ನಾಯ ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾ ಸನ್ನಿದಾನಂಗಳವರ ಕರಕಮಲ ಸಂಜಾತ ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳವರು ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ** ದರ್ಶನ ಮಾಡಿ ಭಕ್ತವೃಂದವನ್ನು ಹರಸಲಿದ್ದಾರೆ.

**ತಾ.20.04.2022, ಬುಧವಾರ**

ಸಮೀಪದ ಸುಬ್ರಹ್ಮಣ್ಯ ದೇಗುಲದ ಉತ್ಸವದ ಪ್ರಯುಕ್ತ ಕಟ್ಟೆ ಪೂಜೆಗಾಗಿ ಸುಬ್ರಹ್ಮಣ್ಯ ಸ್ವಾಮಿಯು ನಮ್ಮ ವಿಷ್ಣುಮೂರ್ತಿ ದೇವರ ಸನ್ನಿಧಿಗೆ ಆಗಮಿಸಲಿದ್ದು ಭಕ್ತ ಬಾಂಧವರು ಈ ಮಂಗಲ ಮುಹೂರ್ತದಲ್ಲಿ ಭಾಗವಹಿಸಬೇಕಾಗಿ ಪ್ರಾರ್ಥನೆ.

**ತಾ.06.05.2022, ಶುಕ್ರವಾರ**

ಶಂಕರ ಜಯಂತಿ ಪ್ರಯುಕ್ತ ಮಹಿಳಾ ಮಂಡಳಿಯವರ ಭಜನೆ ಕಾರ್ಯಕ್ರಮ

**ತಾ.14.05.2022, ಶನಿವಾರ**

ನರಸಿಂಹ ಜಯಂತಿ ಕಾರ್ಯಕ್ರಮಗಳು ಎಂದಿನಂತೆ ಸಂಭ್ರಮದಿಂದ ನೆರವೇರಲಿದೆ.

ಮೇಲಿನ ಎಲ್ಲಾ ಕಾರ್ಯಕ್ರಮಗಳು ಶೃಂಗೇರಿ ಮಠದ ಉಡುಪಿ ಪ್ರಾಂತ್ಯದ ಧರ್ಮಾಧಿಕಾರಿಗಳು ಮತ್ತು ಕ್ಷೇತ್ರದ ತಂತ್ರಿವರೇಣ್ಯರಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ಸಲಹೆ ಸೂಚನೆಯಂತೆ ನಿಯೋಜಿಸಲ್ಪಟ್ಟಿದ್ದು ಭಕ್ತಬಾಂಧವರು ತ್ರಿಕರಣ ಪೂರ್ವಕವಾಗಿ ಭಾಗವಹಿಸಿ ಶ್ರೀ ದೇವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿ

**ಬಿ. ಜಯರಾಮ ರಾವ್, ಆಡಳಿತ ಮೊಕ್ತೇಸರರು (ಮೊ: 9844545040)**
**ಹಾಗೂ ಆಡಳಿತ ಮಂಡಳಿ, ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು**


### ಜೀವನಸಾರ – ಭಾಗ 3

## ಆಲೂಪರಾಠ V/s ಚಪಾತಿಪಲ್ಯ

ಚಪಾತಿಯೊಂದಿಗೆ ಆಲೂಗಡ್ಡೆಯ ಪಲ್ಯವನ್ನು ಸವಿಯದವರಾರು? ಮೆಚ್ಚದವರಾರು? ಇನ್ನು ಆಲೂಪರಾಠ, ಈಗೀಗ ಮನೆಗಳಲ್ಲಿ ಕಾಣಸಿಗುತ್ತದೆ. ಅದನ್ನು ಬಿಸಿಯಾಗಿ, ತೆಳುವಾಗಿ ಬೆಣ್ಣೆಯೊಂದಿಗೆ ಇಲ್ಲವೇ ಗಟ್ಟಿ ಮೊಸರು/ ರಾಯತದೊಂದಿಗೆ ರುಚಿ ನೋಡಬೇಕು, ಅದ್ಭುತ! ಮೇಲೆ ಹೇಳಿದ ಎರಡು ಖಾದ್ಯಗಳಿಗೂ ತಯಾರಿಸಲು ಬೇಕಾದ ಪದಾರ್ಥಗಳು ಒಂದೇ ಆದರೂ ಅವುಗಳ ಅವತಾರ ಮತ್ತು ಸ್ವಾದ ಬೇರೆ ಬೇರೆ! ಆಲೂಗಡ್ಡೆಯ ಪಲ್ಯ ಮಾಡಿ, ನುರಿದು ಚಪಾತಿ ಹಿಟ್ಟಿನಲ್ಲಿ ಹೂರಣದಂತೆ ತುಂಬಿಸಿ ಲಟ್ಟಿಸಿದರೆ, ಎಣ್ಣೆಯಲ್ಲಿ ಕಾಯಿಸಿದರೆ ಪರಾಠ ರೆಡಿ, ಇದಕ್ಕೆ ಚಪಾತಿಗಿಂತ ಹೆಚ್ಚಿನ ಕೌಶಲಬೇಕು. ಮನೆಯಲ್ಲಿ ತಿಂಡಿಗೆ ಪರಾಠ ಇತ್ತು ಎನ್ನುವುದು ಹೆಚ್ಚುಗಾರಿಕೆಯೇ ಸೈ. ಅದೇ ಸಿಂಪಲ್ ಚಪಾತಿಯು ಬಿಸಿಯಾಗಿ ಇಲ್ಲವೇ ತಣ್ಣಗೆ, ಪಲ್ಯದೊಂದಿಗೆ ಇಲ್ಲವೇ ಸಾಂಬಾರು/ರಸಾಯನ/ಉಪ್ಪಿನಕಾಯಿ ಕಡೆಗೆ ಚಹಾದೊಂದಿಗೆ ಕೂಡ ನಮ್ಮ ಹೊಟ್ಟೆ ತುಂಬಿಸುತ್ತದೆ.


ಚಪಾತಿ-ಪರಾಠಗಳ ವ್ಯತ್ಯಾಸ ನೋಡಿದರೆ, ನಮ್ಮ ಸಮಾಜದಲ್ಲಿ ಗಂಡು-ಹೆಣ್ಣು ಮಕ್ಕಳ ವ್ಯತ್ಯಾಸ ನೋಡಿದಂತಾಗುತ್ತದೆ ಒಂದು ಕುಟುಂಬದ ಸೋದರ-ಸೋದರಿಯರು ಒಂದೇ ತಂದೆ-ತಾಯಿಯ ವಂಶವಾಹಿಗಳ ಬೇರೆ ಬೇರೆ ಕಾಂಬಿನೇಷನ್ ಅಷ್ಟೇ! ಹುಡುಗನಾಗಿ ಹುಟ್ಟಿದ್ದಕ್ಕೆ ವಿಶೇಷ ಸಂಭ್ರಮ, ವಿಶೇಷ ವಿದ್ಯೆ, ತಕ್ಕನಾದ ವಿಶೇಷ ಉದ್ಯೋಗ, ಸಮಾಜದಲ್ಲಿ ಒಂದು ವಿಶೇಷ ಸ್ಥಾನಮಾನ. ಹುಡುಗಿಯಾಗಿ ಅದೇ ಮನೆಯಲ್ಲಿ ಹುಟ್ಟಿದರೂ ಇದ್ದುದರಲ್ಲೇ ಸುಧಾರಿಸಿ ಹೊಟ್ಟೆ-ಬಟ್ಟೆ-ವಿದ್ಯೆಗಳ ವ್ಯವಸ್ಥೆ. ಅದಕ್ಕೆ ತಕ್ಕ ಉದ್ಯೋಗವೂ! ಗಂಡು-ಹೆಣ್ಣಿನ ನಡುವಿನ ತಾರತಮ್ಯವು ಅಮಾನವೀಯತೆಯೇ ಸರಿ. ಈಗೀಗ ಹುಡುಗಿಯರಿಗೂ ಸಮಾನ ಅವಕಾಶಗಳು ಸಿಗುತ್ತಿರುವೆಯಾದರೂ ಹೆತ್ತವರ ಸಂಭ್ರಮವೆಂಬುದು ಅವಳ ಪಾಲಿಗೆ ಇಲ್ಲ. ಚಪಾತಿಯೋ, ಪರಾಠವೋ, ಮಗನೋ ಮಗಳೋ ಎರಡಕ್ಕೂ/ಇಬ್ಬರಿಗೂ ತಮ್ಮದೇ ಆದ ಮಾನ್ಯತೆಯುಂಟು. ಪೂರ್ವಾಗ್ರಹ ಪೀಡಿತರಾಗದೇ ಅದನ್ನು ತಿಳಿಯೋಣ.

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಎ. ರಾಘವೇಂದ್ರ ರಾವ್ ಮೈಸೂರು, ಆದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್ ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು, ಶ್ರೀ ವಸಂತ ಕೇದಿಗೆ ಮಂಗಳೂರು

## ಪುಸ್ತಕ ಪರಿಚಯ : ನುಡಿಮುತ್ತುಗಳಲ್ಲಿ ಜೀವನ ಮೌಲ್ಯಗಳು

– ವೈ.ಮೋಹನ ರಾವ್



"ನುಡಿಮುತ್ತುಗಳಲ್ಲಿ ಜೀವನ ಮೌಲ್ಯಗಳು" ಈ ಕೃತಿಯ ಲೇಖಕರು ಎನ್. ಪದ್ಮನಾಭ ರಾವ್. ಇವರು ಸಾರ್ವಜನಿಕ ಗ್ರಂಥಾಲಯದ ಹಿರಿಯ ನಿವೃತ್ತ ಅಧಿಕಾರಿಗಳು. ಲೇಖಕರ ಮೊದಲ ಮಾತು– "ಈ ಬಗ್ಗೆ ಪ್ರಪಂಚದ ಹಲವಾರು ದಾರ್ಶನಿಕರ, ಚಿಂತಕರ, ತತ್ವಜ್ಞಾನಿಗಳ ಅನುಭವ ಮಂಟಪದ ನುಡಿಮುತ್ತುಗಳು, ಸುಭಾಷಿತಗಳು, ಜ್ಞಾನ ಭಂಡಾರದಿಂದ ಆಯ್ದ ಕೆಲವು ಕೆಲವು ನುಡಿಮುತ್ತುಗಳನ್ನು ಈ ಸಂಕಲನದಲ್ಲಿ ನೀಡಲು ಪ್ರಯತ್ನಿಸಿದ್ದೇನೆ. ಈ ಬಗ್ಗೆ ವಿಜಯಕರ್ನಾಟಕದ ದೈನಿಕದಲ್ಲಿ ಪ್ರಕಟವಾಗುವ 'ಹೊಂಗಿರಣ' ಕೆಲವು ಸೂಕ್ತಿಗಳು, ಸಾಪ್ತಾಹಿಕ ಬೋಧಪ್ರದ ಸೂಕ್ತಿಗಳು ಇನ್ನಿತರ ಕಡೆಗಳಿಂದ ಪಡೆದ ಮಾಹಿತಿಗಳು, ಅಲ್ಲದೆ ಮೊಬೈಲ್‌ನಲ್ಲಿ ಆಪ್ತರು 'ವಾಟ್ಸಾಪ್'ನಲ್ಲಿ ಕಳಿಸಿದ ಸುಭಾಷಿತಗಳು, ಅದರಲ್ಲಿ ಮುಖ್ಯವಾಗಿ ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ, ರಾಮರಾವ್ ಕುಟುಂಬದವರು, ನನ್ನ ತಮ್ಮ ಚಂದ್ರಶೇಖರನ ಮಗ 'ರಾಜಾರಾಮ್' ಹಾಗೂ ಇತರ ಕಡೆಗಳಿಂದ ದೊರಕಿದ ಮಾಹಿತಿಗಳನ್ನು ಕಲೆ ಹಾಕಿ ಸುಮಾರು 1,111 (ಒಂದು ಸಾವಿರದ ನೂರ ಹನ್ನೊಂದು) ಜೀವನ ಮೌಲ್ಯಗಳ ಸಂಕಲನವನ್ನೇ ನೀಡಲಾಗಿದೆ".

ಶ್ರೀನಿವಾಸ ಕುಂಡಂತಾಯ ಇವರ ಮುನ್ನುಡಿಯ ಸಾಲುಗಳು : 'ಮೂವತ್ತೈದು ರಾಷ್ಟ್ರೀಯ ಹೋರಾಟಗಾರರನ್ನು ಮತ್ತು ಇಪ್ಪತ್ತಾರು ಕರ್ನಾಟಕದ ಹೋರಾಟಗಾರರನ್ನು ಪರಿಚಯಿಸುವ 'ಭಾರತ ಸ್ವಾತಂತ್ರ್ಯ ಹೋರಾಟದ ದಿಗ್ಗಜರು ಮತ್ತು ಗ್ರಂಥ ಸುಭಾಷಿತಗಳು' ಎಂಬ ಪುಸ್ತಕ ಹಾಗೂ ಇತ್ತೀಚೆಗೆ 'ಕರ್ನಾಟಕ ಸ್ವಾತಂತ್ರ್ಯ ಹೋರಾಟದ ಕಣ್ಮಣಿಗಳು' ಎಂಬ ಕೃತಿಯನ್ನು ಕನ್ನಡಿಗರಿಗೆ ಕೊಡುಗೆಯಾಗಿ ನೀಡಿದ ಸಾರ್ವಜನಿಕ ಗ್ರಂಥ ಇಲಾಖೆಯಲ್ಲಿ ಉನ್ನತ ಹುದ್ದೆಯಿಂದ ನಿವೃತ್ತರಾದ ಸರಳಸಜ್ಜನಿಕೆಯ ಶ್ರೀ ಎನ್. ಪದ್ಮನಾಭ ರಾಯರು, ಅವರ ಮುಂದಿನ ಅತ್ಯುಪಯುಕ್ತ ಕೃತಿ 'ಜೀವನ ಮೌಲ್ಯಗಳು' ಎಂಬ ಸಂಗ್ರಹ ಗ್ರಂಥಕ್ಕೆ ಮುನ್ನುಡಿ ಬರೆದುಕೊಡಬೇಕೆಂದು ಕೇಳಿದಾಗ, ಎಲೆಮರೆಯ ಕಾಯಿಯಾಗಿಯೇ ಇರಲು ಬಯಸುವ ನಾನು ಮುಜುಗರ ಪಟ್ಟದ್ದು ಸತ್ಯ. ಆದರೆ ಶ್ರೀ ಪದ್ಮನಾಭ ರಾಯರ ನಿರ್ಮಲವಾದ ಪ್ರೀತಿ ವಿಶ್ವಾಸಕ್ಕೆ ಕಟ್ಟುಬಿದ್ದು ಮುನ್ನುಡಿ ಬರೆಯುವ ಸಾಹಸಕ್ಕೆ ಕೈ ಹಾಕಿದ್ದೇನೆ'.

ಎ.ಜಿ.ರಾಮಸ್ವಾಮಿ, ಶಾಸಕರು, ಸಮಾಜಸೇವಕರು, 'ಚೆನ್ನುಡಿ' ಯಲ್ಲಿ ತಿಳಿಸುತಾರೆ. 'ಇಲ್ಲಿ ಲೇಖಕರು ಶ್ರಮಪಟ್ಟು ಮಾನವನ ಅನೀತಿ, ಅನಾಚಾರ, ಸುಳ್ಳು, ಕಪಟ, ಬೂಟಾಟಿಕೆ, ದಾಂಭಿಕತೆ ಇನ್ನೂ ಅನೇಕ ದುರ್ಗುಣಗಳನ್ನು ಹೋಗಲಾಡಿಸಲು ಉತ್ಕೃಷ್ಟ ನುಡಿಮುತ್ತುಗಳನ್ನು ಸಂಗ್ರಹಿಸಿ ಜೀವನದಲ್ಲಿ ರೂಢಿಸಿಕೊಳ್ಳಲು ಬದುಕಿನ ಮೌಲ್ಯಗಳನ್ನು ನೀಡಿ ಸಮಾಜಕ್ಕೆ ದೊಡ್ಡ ಉಪಕಾರ ಮಾಡಿದ್ದಾರೆ. ದುಷ್ಟ ಸ್ವಭಾವದ ಜನರಿಂದ ಸಮಾಜದಲ್ಲಿ ಯಾವುದೇ ಒಳಿತನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಮನುಷ್ಯ ಮನುಷ್ಯನಾಗಿ ಬಾಳಿ ಬದುಕಬೇಕೆಂಬ ಹಿತ ಚಿಂತನೆ ಸಂಗ್ರಹಿಸಿರುವ ನುಡಿಮುತ್ತುಗಳಲ್ಲಿ ಅಡಕವಾಗಿವೆ.

ಎಸ್.ಎಸ್. ಪಡಶೆಟ್ಟಿ, ಸಂಪಾದಕರು, 'ಹಾಸ್ಯದರ್ಶನ' ಮತ್ತು ಪ್ರಕಾಶಕರಾದ ಅವರು 'ಆಶಯನುಡಿ'ಯಲ್ಲಿ ಹೀಗೆ ಹೇಳುತಾರೆ. 'ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ರೂಢಿಸಿಕೊಂಡು ಬದುಕನ್ನು ಸಾರ್ಥಕಪಡಿಸಿಕೊಂಡಿರುವ ಉತ್ಕೃಷ್ಟ ನ್ಯಾಯವಾದಿಗಳು ನಿವೃತ್ತ ಲೋಕಾಯುಕ್ತರಾದ ಪೂಜ್ಯ ಶ್ರೀ ಸಂತೋಷ ಹೆಗ್ಡೆಯವರಿಗೆ ಲೇಖಕರು ಈ ಕೃತಿಯನ್ನು ಅರ್ಪಿಸಿದ್ದು ಲೇಖಕರ ಶ್ರೇಷ್ಠಗುಣ. ಕಠಿಣ ಪರಿಶ್ರಮವಹಿಸಿ ಲೇಖಕರು ಸಹಸ್ರಾರು ನುಡಿಮುತ್ತುಗಳನ್ನು ಸಂಗ್ರಹಿಸಿ ಓದುಗರಿಗೆ ಲಾಭ ಮಾಡಿಕೊಟ್ಟಿದ್ದಾರೆ'.

ಎಚ್.ಎಸ್. ದೊರೆಸ್ವಾಮಿ ಸ್ವಾತಂತ್ರ್ಯ ಹೋರಾಟಗಾರರು ಕೃತಿಯ 'ಬೆನ್ನುಡಿ'ಯಲ್ಲಿ ಹೀಗೆ ಹೇಳುತ್ತಾರೆ. 'ಇಂದಿನ ಯುವ ಜನಾಂಗ ಇಂತಹ ನುಡಿಮುತ್ತುಗಳನ್ನು ಅಧ್ಯಯನ ಮಾಡಿ ತಮ್ಮ ನಿಜ ಜೀವನದಲ್ಲಿ ಅಳವಡಿಸಿಕೊಂಡರೆ ಸತ್ಪ್ರಜೆಗಳಾಗಿ ಬಾಳಿದರೆ ತನ್ನ ಕುಟುಂಬಕ್ಕೆ, ಸಮಾಜಕ್ಕೆ, ದೇಶಕ್ಕೆ, ತನ್ನ ಜೀವನವೇ ಒಂದು ದೊಡ್ಡ ಕೊಡುಗೆಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಲೇಖಕರಾದ ಸನ್ಮಾನ್ಯ ಶ್ರೀ ಎನ್. ಪದ್ಮನಾಭ ರಾವ್‌ರವರಿಗೆ ಶುಭಾಶಯಗಳನ್ನು ಕೋರುತ್ತೇನೆ. ಕನ್ನಡ ಸಾರಸ್ವತ ಲೋಕಕ್ಕೆ ಅವರ ಕೊಡುಗೆ ಅನನ್ಯವಾದದ್ದು'.

ನುಡಿಮುತ್ತುಗಳಲ್ಲಿ ಜೀವನ ಮೌಲ್ಯಗಳು 12 ಶೀರ್ಷಿಕೆಗಳ ಅಡಿಯಲ್ಲಿ ಪ್ರತಿನಿಧಿಸಲಾಗಿದೆ. 1. ಜೀವನ ಮೌಲ್ಯಗಳು * ಜೀವನದ ಸವಿಯನ್ನು ಅನುಭವಿಸಬೇಕಾದರೆ ಕಳೆದು ಹೋದ ಘಟನೆಗಳನ್ನು ಮರೆಯುವ ಶಕ್ತಿ ರೂಢಿಸಿಕೊಳ್ಳಬೇಕು. * ಕನ್ನಡವೇ ಉಸಿರು, ಕನ್ನಡವೇ ಹಸಿರು, ಕನ್ನಡಂ ಕಸ್ತುರಿಯಲ್ತೆ. * ಒಳಗಣ್ಣನ್ನು ತೆರೆದು ಒಳಗನ್ನು ಕಾಣು. ಇತ್ಯಾದಿ. 2. ಬದುಕಿನ ಪ್ರಚಲಿತ ಆಚಾರ–ವಿಚಾರ * ಬಂದಿದ್ದೆಲ್ಲಾ ಬರಲಿ ಗೋವಿಂದನ ದಯೆ ಇರಲಿ. * ತುಂಬಿದ ಕೊಡ ತುಳುಕುವುದಿಲ್ಲ. * ಜೀವನವೇ ಒಂದು ಸಂದೇಶವಾಗಿ ಮಾರ್ಪಟ್ಟು ಸಾರ್ಥಕತೆಯನ್ನು ಪಡೆಯುವಂತೆ ನಡೆ–ನುಡಿ ಒಂದಾಗಿ ಇರಬೇಕು. ಇತ್ಯಾದಿ. 3. ಜೀವನದ ಮೌಲ್ಯಗಳಲ್ಲಿ ಮಾನವೀಯ ಸಂಬಂಧಗಳು * ಮನಸು ಮಲ್ಲಿಗೆಯಾದರೆ ಮಾತು ಪರಿಮಳ * ಸಿಕ್ಕ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು. * ಸಮಾಜದ ನೈತಿಕ ಮೌಲ್ಯಗಳು ಕುಸಿದಲ್ಲಿ, ಎಲ್ಲಾ ಜೀವನ ಮೌಲ್ಯಗಳೂ ಕುಸಿದಂತೆ. ಇತ್ಯಾದಿ. 4. ಜೀವನದ ಆಚಾರ–ವಿಚಾರ 5. ಎಷ್ಟು ಕಾಲ ಬಾಳಿದೆವು ಎನ್ನುವುದಕ್ಕಿಂತ ಹೇಗೆ ಬಾಳಿದೆವೆನ್ನುವುದು ಮುಖ್ಯ. 6. ಮೌನ ಮನಸ್ಸು ಶುದ್ಧಿ ಮಾಡುತ್ತದೆ. 7. ಸೇಡಿಗಾಗಿ ಹೋರಾಟ ಯಾರು ಗೆದ್ದಿಲ್ಲ. 8. ಆತ್ಮವಿಶ್ವಾಸದಂತಹ ಮಿತ್ರ ಬೇರಿಲ್ಲ. 9. ಸತ್ಸಂಗವೇ ಜೀವನ ಮೌಲ್ಯಗಳು. 10. ನಗು ಬೆಲೆ ಕಟ್ಟಲಾಗದಷ್ಟು ಅಮೂಲ್ಯ. 11. ಸೇವೆಯೇ ಪರಮ ಧರ್ಮ. 12. ವಿಶ್ವಾಸವೇ ವಿಜಯಕ್ಕೆ ಮೂಲ.

ಪುಸ್ತಕದ ಮುಖಪುಟ ಚಿತ್ರ. ವಿಶಾಲ ಹಸಿರು ವೃಕ್ಷ, ಅಸಂಖ್ಯ ಕಾಂಡಗಳು, ಗೆಲ್ಲುಗಳು, ಹಸಿರು ಉಸಿರು ಎಲೆಗಳು ಸೊಗಸಾಗಿ ಮೂಡಿಬಂದಿವೆ. ಇವೆಲ್ಲ ನುಡಿಮುತ್ತುಗಳಂತೆ ಜೀವನ ಮೌಲ್ಯಗಳನ್ನು ಪ್ರತಿಬಿಂಬಿಸುತ್ತವೆ. ಇಂತಹ ನುಡಿಮುತ್ತುಗಳಲ್ಲಿನ ಜೀವನ ಮೌಲ್ಯಗಳು ಅಮೂಲ್ಯ ಸಂಪತ್ತಿನ ನಿಧಿಯಾಗಿದೆ. ಪುಸ್ತಕ ಓದುವುದೇ ಅವಶ್ಯಕ ಶ್ರಮ ಎಂಬುದಕ್ಕೆ ಈ ಪುಸ್ತಕವೇ ಉದಾಹರಣೆ. ಇಂತಹ ನುಡಿಮುತ್ತುಗಳನ್ನು ಅಧ್ಯಯನ ಮಾಡಿ ಜೀವನದಲ್ಲಿ ಈ ಸಂಪತ್ತಿನ ನಿಧಿಯನ್ನು ಅಳವಡಿಸಿಕೊಂಡರೆ ಲೇಖಕರ ಉದ್ದೇಶ ಈಡೇರಿದಂತಾಗುತ್ತದೆ. ಶ್ರೀ.ಎನ್.ಪದ್ಮನಾಭ ರಾವ್ ರವರಿಗೆ ಹಾರ್ದಿಕ ಶುಭಾಶಯಗಳು.

## ಹರಿದಾಸ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯರವರ ವ್ಯಕ್ತಿ ಪರಿಚಯ



–ಡಾ.ಬಿ ಜನಾರ್ದನ ಭಟ್

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಕೆಲವೊಮ್ಮೆ ಯಕ್ಷಗಾನದ ಪಾತ್ರಧಾರಿಯಂತೆ ಮತ್ತೆ ತಮ್ಮ ಕಾಲ್ಗೆಜ್ಜೆಗಳ ಘಲ್ ಘಲ್ ಧ್ವನಿಯ ಮೇಳಕ್ಕೆ, ಕೈಗಳಲ್ಲಿ ಹಿಡಿದಿರುವ ಮಂಜಿರದ ಕಿಣಿ ಕಿಣಿ ರವವನ್ನು ಹೊಂದಿಸುತ್ತಾ ಅವರು ಹಾಡಲು ಶುರುಮಾಡಿದರೆ ಅಲ್ಲಿಯ ವಾತಾವರಣ ಗಂಧರ್ವಲೋಕವೆಂಬಂತೆ ಭಾಸವಾಗುತ್ತಿತ್ತು. ಇಡೀ ಸಭೆಯೇ ತಾಳ ಹಾಕುತ್ತಿತ್ತು, ತಲೆತೂಗುತ್ತಿತ್ತು. ಕೆಲವೊಮ್ಮೆ ತನ್ಮಯತೆಯೆ ಸಮಾಧಿಯಲ್ಲೇ ಮೈ ಮರೆಯುತ್ತಿತ್ತು. ಶ್ರೋತೃಗಳು ಕಥೆಯನ್ನು ಭಾವಪರವಶರಾಗಿ ಕೇಳುತ್ತಿದ್ದರು. ಇಂತಹ ಶ್ರೋತೃವೃಂದದಲ್ಲಿ ಕೆಲವು ಕಡೆ ಸಮಯ ಕಳೆಯಲು ಬರುವ ಜನರೂ ಇದ್ದ ಹಾಗೇ ಇನ್ನು ಕೆಲವು ಕಡೆ ತಮ್ಮ ಶ್ರೀಮಂತಿಕೆಯನ್ನು ಮೆರೆಸುವ ಸಲುವಾಗಿ ಬರುತ್ತಿದ್ದ ಬೂಟಾಟಿಕೆಯ ಭಕ್ತರೂ ಇದ್ದರು. ಆ ಕಡೆ ಹರಿದಾಸರು ಗಂಭೀರವಾಗಿ ಕಥೆ ಹೇಳುತ್ತಿದ್ದರೆ ಈ ಕಡೆ ಇವರು ಹರಟುತ್ತಾ ತಮ್ಮದೇ ಲೋಕದಲ್ಲಿ ಮೈಮರೆಯುತ್ತಿದ್ದರು. ಇಂತಹವರನ್ನು ಕೂಡಲೇ ಉಪಕಥೆ ಪದ್ಯಗಳ ಮೂಲಕ ಹರಿದಾಸರು ಎಚ್ಚರಿಸುತ್ತಿದ್ದರು. ಅದಕ್ಕೂ ಅವರು ಜಗ್ಗದಿದ್ದರೆ ಹರಿಕಥೆಯನ್ನು ಅಲ್ಲಿಯೇ ನಿಲ್ಲಿಸಿ ಬಿಡುತ್ತಿದ್ದರು. ಇಂತಹ ಹಲವಾರು ಘಟನೆಗಳಲ್ಲಿ ಒಂದೆರಡು ಹೀಗಿವೆ.

ಪಾಂಡವರ ವನವಾಸ ಸಂದರ್ಭ: ಕಥೆ ಬಹಳ ರಸವತ್ತಾಗಿ ನಡೆಯುತ್ತಿತ್ತು. ಇತ್ತ ಕಡೆ ಸಭೆಯಲ್ಲಿ ಆಸೀನರಾಗಿದ್ದ ಶ್ರೀಮಂತರಿಬ್ಬರು ತಾವು ಎಲ್ಲಿ ಕೂತಿದ್ದೇವೆ ಎಂಬುದನ್ನು ಮರೆತು ಲೋಕಾಭಿರಾಮವಾಗಿ ಗಟ್ಟಿಯಾಗಿ ಹರಟುತ್ತಿದ್ದರು. ಇದರಿಂದ ಪಕ್ಕದವರಿಗೆ ಹಿಂಸೆಯಾಗುತ್ತಿದ್ದರೂ ತಮ್ಮದೇ ಲೋಕದಲ್ಲಿ ಮುಳುಗಿದ್ದ ಆ ಧನಾಢ್ಯರನ್ನು ಯಾರೊಬ್ಬರೂ ಎಚ್ಚರಿಸುವ ಧೈರ್ಯ ತಾಳಲಿಲ್ಲ. ಇದನ್ನು ಗಮನಿಸುತ್ತಿದ್ದ ದಾಸರು ಉಪಕಥೆಯ ಸಂದರ್ಭವನ್ನು ಉಪಯೋಗಿಸಿ ಅವರ ಗಮನ ಸೆಳೆಯಲು ಪ್ರಯತ್ನಿಸಿದರು. ಹರಿದಾಸರ ಈ ಯುಕ್ತಿಯೂ ಫಲಕೊಡದಿದ್ದಾಗ ದಾಸರು ಸ್ವಲ್ಪ ಎತ್ತರ ಸ್ವರದಲ್ಲಿ ನಿಮ್ಮ ಊಟೋಪಚಾರದ ವ್ಯವಸ್ಥೆ ಬೇಗನೆ ಆಗುತ್ತದೆ, ಅಷ್ಟರವರೆಗೆ ನಾರಾಯಣ ನಾರಾಯಣ ಎಂದು ಸುಮ್ಮನಿರಿ ಎಂದು ಎಚ್ಚರಿಸಿದರೂ ಸುಮ್ಮನಾಗದ ಧನಾಢ್ಯರನ್ನು ಕುರಿತು ದಾಸರು ಒಂದು ಹಾಡನ್ನು ರಚಿಸಿ ಹಾಡಿಯೇ ಬಿಟ್ಟರು.

*ಇಂಥ ಜನಗಳಿಗೆ ಎಂಥಾದ್ದು ಹರಿಕಥೆ ।*
*ಕುಂತಿಮಕ್ಕಳಿಗಾಯ್ತು ಕಾಂತಾರವಾಸ ॥ಪಲ್ಲ॥*

*ಸ್ವಂತ ಧರ್ಮವ ಬಿಟ್ಟು ಆಂತನ್ಯ ಧರ್ಮವ ।*
*ಸಂತಾಪಕ್ಕೊಳಗಾಗಿ ಭ್ರಾಂತಿಪಟ್ಟಿಹರು ॥೧॥*

*ಜೀವಿಸಿ ಮೃಗದಂತೆ ಸಾವನು ಬಗೆಯದೆ ।*
*ಕೇವಲ ತಾಮಸ ಯಾವಜ್ಜೀವನವು ॥೨॥*

*ಸರಕಾರದ ಭಯ ಸರ್ವರಿಗಿದ್ದರು ।*
*ಸರಿಯಾಗಿ ನಡೆಯದೆ ಬರಿದೆ ಬಳಲುವರು ॥೩॥*

*ಬಡವರ ಬಾಯನು ಹೊಡೆದು ತಂದು ತನ್ನ ।*
*ಮಡದಿಮಕ್ಕಳಿಗುಣಬಡಿಸಿ ಮೆರೆವರ್ಯೈ ॥೪॥*

*ಲಕ್ಷ್ಮೀನಾರಾಯಣನ ಲಕ್ಷಣಾಂಕಿತರನ್ನು ।*
*ಲಕ್ಷ್ಯಕ್ಕೆ ತಾರದ ಕುಕ್ಷಿಂಭರರು ॥೫॥*

ಈ ಹಾಡು ವನವಾಸದ ಕಥೆಗೆ ಇನ್ನಷ್ಟು ಮೆರುಗನ್ನು ಕೊಟ್ಟಿತ್ತು. ಈ ಹಾಡು ಎಷ್ಟು ಸಾಂದರ್ಭಿಕವಾಗಿತ್ತೆಂದರೆ ಹರಿಕಥೆಯನ್ನು ಆ ದಿನಕ್ಕೆ ಆ ಹಂತಕ್ಕೆ ನಿಲ್ಲಿಸಿದ್ದೇ ಸಭಿಕರಿಗೆ ತಿಳಿಯಲಿಲ್ಲ. ಅಷ್ಟು ಮಾರ್ಮಿಕವಾಗಿ, ಜಾಣ್ಮೆಯಿಂದ ಆ ಶ್ರೀಮಂತರಿಗೆ ಛಡಿಯೇಟನ್ನು ಕೊಟ್ಟಿದ್ದರು ಹರಿದಾಸರು.

(ಮುಂದುವರಿಯುವುದು)

*With Best Complimemts From*
**SRI M. SHAILESH RAO**
Ph : 9448624324
B.E., Civil
**Civil Engineer & Contractor**
**SRI MALAVIKA ASSOCIATES**
KALSANKA-UDUPI ROAD, UDUPI.
**Website : shreemaalavikaassociates.com**

Ph : 98459 92859
**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
**ಯಶಸ್ವೀ ಎಂಟರ್‌ಪ್ರೈಸೆಸ್**
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

## ಉದಯಾದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ ಪಡುಬಿದ್ರಿ

# ಪೂರ್ಣ ಕುಂಭಾಭಿಷೇಕ ಹಾಗೂ ಪುಷ್ಪರಥ ಸಮರ್ಪಣೆ

ಪ್ರಿಯ ಭಗವದ್ಭಕ್ತರೆ,

ಶ್ರೀಮತ್ ಪರಮಹಂಸಪರಿವ್ರಾಜಕಾಚಾರ್ಯವರ್ಯೇತ್ಯಾದಿ ಅನೇಕ **ಬಿರುದಭೂಷಿತರಾದ ದಕ್ಷಿಣಾಮ್ನಾಯ ಶ್ರೀಶೃಂಗೇರಿ ಶಾರದಾಪೀಠಾಧೀಶ್ವರ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀ ತೀರ್ಥಮಹಾಸ್ವಾಮಿಗಳ ಮತ್ತು ತತ್ಕರಕಮಲಸಂಜಾತರಾದ ಶ್ರೀಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳ ಪರಮಾನುಗ್ರಹಪುರಸ್ಸರ ಆಶೀರ್ವಾದಗಳಿಂದ**

ಸ್ವಸ್ತಿ ಶ್ರೀ ಶಾಲಿವಾಹನಶಕವರ್ಷ 1944 ನೇ ಶುಭಕೃನ್ನಾಮ ಸಂವತ್ಸರದ ಚೈತ್ರ ಮಾಸ ಶುದ್ಧ ಚತುರ್ದಶಿಯಿಂದ ಕೃಷ್ಣಪಾಡ್ಯದವರೆಗೆ **ದಿನಾಂಕ 15.04.2022 ಶುಕ್ರವಾರದಿಂದ 17.04.2022 ರವಿವಾರದವರೆಗೆ** ಶ್ರೀ ಬಾಲಗಣಪತಿ ದೇವರ ಬ್ರಹ್ಮಕುಂಭಾಭಿಷೇಕ ಹಾಗೂ ಪುಷ್ಪರಥ ಸಮರ್ಪಣಾ ಮಹೋತ್ಸವಗಳು ಸಂಪನ್ನಗೊಳ್ಳಲಿರುವುದು. ಶ್ರೀ ಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳವರು ನಮ್ಮ ಭಕ್ತಿಯುಕ್ತ ಪ್ರಾರ್ಥನೆಯನ್ನು ಅಂಗೀಕರಿಸಿ **ಚೈತ್ರ ಕೃಷ್ಣ ಪ್ರತಿಪತ್ ದಿನಾಂಕ 17.04.2022 ರವಿವಾರದಂದು ಶೃಂಗೇರಿಯಿಂದ ಶ್ರೀ ಕ್ಷೇತ್ರಕ್ಕೆ ದಯಮಾಡಿಸಿ ತಮ್ಮ ದಿವ್ಯ ಅಮೃತಹಸ್ತಗಳಿಂದ ಬ್ರಹ್ಮಕುಂಭಾಭಿಷೇಕ ಹಾಗೂ ಪುಷ್ಪರಥಸಮರ್ಪಣೆಯನ್ನು ನಡೆಸಿಕೊಡಲಿದ್ದಾರೆ.**

ಶ್ರೀ ಗುರುದೇವತಾನುಗ್ರಹದಿಂದ ನೆರವೇರಲಿರುವ ಸಮಸ್ತ ಧಾರ್ಮಿಕ ಕಾರ್ಯಕ್ರಮಗಳಿಗೆ ತಾವೆಲ್ಲರೂ ಆಗಮಿಸಿ ತನು ಮನ ಧನಗಳಿಂದ ಸಹಕರಿಸಿ, ಶ್ರೀ ಮುಡಿ ಗಂಧಪ್ರಸಾದಗಳನ್ನು ಸ್ವೀಕರಿಸಿ ಶ್ರೀ ಬಾಲಗಣಪತಿ ದೇವರ, ಪ್ರಸನ್ನ ಪಾರ್ವತಿ ಅಮ್ಮನವರ ಮತ್ತು ಶ್ರೀ ಮಜ್ಜಗದ್ಗುರುಗಳ ಅಪಾರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

ಡಾ । ವೈ.ಎನ್.ಶೆಟ್ಟಿ ಅಧ್ಯಕ್ಷರು, ಜಗದಭಿರಾಮ ಸ್ವಾಮಿ ಪ್ರಧಾನ ಅರ್ಚಕರು, ಪಿ.ರಘುವೀರ ರಾವ್ ಅಧ್ಯಕ್ಷರು, ಎಂ.ದೇವಾನಂದ ಭಟ್ ಬೆಳುವಾಯಿ ಪ್ರಧಾನ ಕಾರ್ಯದರ್ಶಿ ಬ್ರಹ್ಮಕಲಶೋತ್ಸವ ಸಮಿತಿ, ಶ್ರೀನಿವಾಸ ಶರ್ಮ ಕಾರ್ಯದರ್ಶಿ, ಆಡಳಿತ ಮಂಡಳಿ, ಆಡಳಿತ ಮಂಡಳಿ, ಬ್ರಹ್ಮಕಲಶೋತ್ಸವ ಸಮಿತಿ ಮತ್ತು ಊರ ಹತ್ತು ಸಮಸ್ತರು, ಪಡುಬಿದ್ರಿ



ಆಮಂತ್ರಣ ಪತ್ರಿಕೆ ಬಿಡುಗಡೆ.....

## ನಿಧನ

### ಶ್ರೀ.ಎಂ.ಎನ್.ವೆಂಕಟೇಶ್ ರಾವ್



ಶ್ರೀ.ಎಂ.ಎನ್.ವೆಂಕಟೇಶ್ ರಾವ್ ಇವರು ತಾರೀಕು 30.03.2022 ರಂದು ಮೂಡಿಗೆರೆಯಲ್ಲಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

★★★★ ★★★★

### ಶ್ರೀಮತಿ ಸುಶೀಲಾ



ಪ್ರೊ. ಕಟೀಲು ರಾಮ ಉಪಾಧ್ಯ ಇವರ ಪತ್ನಿ ಶ್ರೀಮತಿ ಸುಶೀಲಾ (79 ವರ್ಷ) ಮಂಗಳೂರಿನಲ್ಲಿ ದಿನಾಂಕ 29-03-2022 ರಂದು ನಿಧನರಾದರು. ಮೃತರು ಪತಿ, ಒಬ್ಬ ಪುತ್ರ, ಈರ್ವರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

# ಶ್ರೀ ಅಶ್ವತ್ ಹೆಬ್ಬಾರ್ ಪೆರ್ಡೂರು ಇವರಿಗೆ ಅಭಿನಂದನೆ



"ಕೃಷಿತೋ ನಾಸ್ತಿ ದುರ್ಭಿಕ್ಷಮ್" ಎಂಬ ಉಕ್ತಿಯಂತೆ ನಡೆವ ಶ್ರೀ ಅಶ್ವತ್ ಹೆಬ್ಬಾರ್ ಪೆರ್ಡೂರು ಇವರಿಗೆ ಉಡುಪಿ ಜಿಲ್ಲಾ ಕೃಷಿಕ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಇವರು ತಮ್ಮ ಕೃಷಿ ಭೂಮಿಯಲ್ಲಿ ನಿಷ್ಠೆ, ಪ್ರಾಮಾಣಿಕರಾಗಿ ದುಡಿಯುತ್ತಿದ್ದು ಸಾವಯವ ಗೊಬ್ಬರ, ವೈಜ್ಞಾನಿಕ ಕೃಷಿ, ಸಮಗ್ರ ಕೃಷಿ ಅನುಸರಿಸುವುದರ ಮೂಲಕ ಕೃಷಿ ಲಾಭದಾಯಕ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ವೈವಿಧ್ಯಮಯ ಬೆಳೆಗಳನ್ನು ಮಾಡಿ, ಭೂಮಿಯನ್ನು ಹಸನುಗೊಳಿಸಿ, ಪ್ರಕೃತಿಮಾತೆಯ ಕೃಪೆಗೆ ಒಳಗಾಗಿದ್ದಾರೆ. ವಿವಿಧ ಸಂಘ ಸಂಸ್ಥೆಗಳಲ್ಲಿ, ಹಲವು ಉಪಕಸುಬುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕೃಷಿಕ ಸಂಘದಲ್ಲಿ ಸಕ್ರಿಯರಾಗಿದ್ದಾರೆ. ಸಂಘದ ಹೋರಾಟವಿರಲಿ, ಮಾಹಿತಿ ಶಿಬಿರವಿರಲಿ, ಸಮಾವೇಶವಿರಲಿ ಹೀಗೆ ಎಲ್ಲದರಲ್ಲೂ ತಪ್ಪದೇ ಭಾಗವಹಿಸುವುದರ ಮೂಲಕ ಉತ್ತಮ ಕಾರ್ಯಕರ್ತರು ಎನ್ನಿಸಿಕೊಂಡಿದ್ದಾರೆ. ಹೀಗೆ ಸರಳ ವ್ಯಕ್ತಿತ್ವ, ಹಸನ್ಮುಖಿ, ಕಾಯಕದಲ್ಲಿ ನಿಷ್ಠೆ, ಪ್ರಾಮಾಣಿಕತೆಯನ್ನು ಗುರುತಿಸಿ ಜಿಲ್ಲಾ ರೈತ ಸಮಾವೇಶ 2022 ರಂದು ಗಣ್ಯರ ಸಮ್ಮುಖದಲ್ಲಿ "ಜಿಲ್ಲಾ ಮಟ್ಟದ ಸಾಧನಾಶೀಲ ಪ್ರಶಸ್ತಿ" ಪತ್ರವನ್ನು ನೀಡಿ ಗೌರವಿಸಲಾಗಿದೆ. ಶ್ರೀ ದೇವರು ಇವರಿಗೆ, ಇವರ ಕುಟುಂಬಕ್ಕೆ ಆಯುರಾರೋಗ್ಯ, ಐಶ್ವರ್ಯ, ನೆಮ್ಮದಿಯನ್ನು ನೀಡಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

## ಬ್ರಹ್ಮೋಪದೇಶ

ಶ್ರೀಮತಿ ಸ್ಮಿತಾ ಮತ್ತು ಶ್ರೀ ಪಿ. ಶರತ್‌ಚಂದ್ರ ದಂಪತಿಯ ಪುತ್ರ ಪಿ. ಶಶಾಂಕ್ ನ ಬ್ರಹ್ಮೋಪದೇಶವು ತಾ : 03.04.2022 ರಂದು "ಉಡುಪಿ ರಥಬೀದಿಯ ರಾಘವೇಂದ್ರ ಮಠದ ಸಭಾಂಗಣದಲ್ಲಿ" ಜರಗಿತು.

★★★★ ★★★★

ಶ್ರೀಮತಿ ಶ್ರೀದೇವಿ ಮತ್ತು ಶ್ರೀ ಪ್ರದೀಪ್ ಭಂಡಿ ಪೆರ್ಡೂರು ದಂಪತಿಗಳ ಪುತ್ರ ಪ್ರತೀಕ್‌ನ ಬ್ರಹ್ಮೋಪದೇಶವು ತಾ.07.04.2022ರಂದು "ಓಂತಿಬೆಟ್ಟಿನ ಆರ್‌ಎಸ್‌ಬಿ ಸಭಾಂಗಣ"ದಲ್ಲಿ ಜರಗಿತು.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ

**ತಾ.19-04-2022 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.21-04-2022 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.21-04-2022 ಮತ್ತು ತಾ.06-05-2022 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಮೇಷ ಮಾಸದ ವಿಶೇಷ ದಿನಗಳು

| | | | |
|---|---|---|---|
| 14-04-2022 | ಮೇಷ ಸಂಕ್ರಮಣ | 01.05.2022 | ವಸಂತಋತು ವೈಶಾಖ ಮಾಸದ ಶುಕ್ಲಪಕ್ಷಾರಂಭ |
| 15-04-2022 | ಸೌರಯುಗಾದಿ, ಶುಭಕೃತು ಸಂವತ್ಸರ ಆರಂಭ (ಸೌರಮಾನ) | 03.05.2022 | ಅಕ್ಷಯ ತೃತೀಯ |
| 16-04-2022 | ಹುಣ್ಣಿಮೆ | 06.05.2022 | ಶಂಕರ ಜಯಂತಿ |
| 17-04-2022 | ವಸಂತಋತು ಚೈತ್ರ ಮಾಸದ ಕೃಷ್ಣಪಕ್ಷಾರಂಭ | 12.05.2022 | ಸರ್ವೈಕಾದಶಿ |
| | | 13.05.2022 | ಉಡುಪಿ ವಸಂತೋತ್ಸವ |
| 19-04-2022 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 9.27 | 14.05.2022 | ವೃಷಭ ಸಂಕ್ರಮಣ |
| | | 16.05.2022 | ಬುದ್ಧ ಪೂರ್ಣಿಮಾ |
| 26.04.2022 | ಸರ್ವೈಕಾದಶಿ | 17.05.2022 | ವಸಂತ ಋತು ವೈಶಾಖ ಮಾಸದ ಕೃಷ್ಣಪಕ್ಷಾರಂಭ |
| 30.04.2022 | ಅಮಾವಾಸ್ಯೆ | | |


ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655

ಕಾರ್ಕಳದಲ್ಲಿ ಪ್ರಥಮ
ತಾಜಾ ಹಾಗೂ ಉತ್ತಮ ಗುಣ ಮಟ್ಟದ ಎಲ್ಲಾ ರೀತಿಯ ಹಿಟ್ಟು ಒಂದೇ ಜಾಗದಲ್ಲಿ ಲಭ್ಯ.
ನಮ್ಮಲ್ಲಿ ಗೋಧಿ, ಜೋಳ, ಅಕ್ಕಿ, ರಾಗಿ ಹಿಟ್ಟು ಹಾಗೂ ಅಕ್ಕಿ ರವ ದೊರೆಯುತ್ತದೆ.
ಪ್ರಕೃತಿ ಸ್ಟೋರ್ಸ್
ಪ್ರಸಾದ್ ಭವನ (ವಿ. ಕೆ. ಡೆಕೋರೇಟರ್ಸ್ ಬಳಿ)
ಹೊಟೇಲ್ ಮಹಾಲಸಾ ಎದುರು, ತೆಳ್ಳಾರು ರಸ್ತೆ, ಕಾರ್ಕಳ
For The First Time We Are Introducing Fresh And Good Quality Of Rice, Ragi, Jowar & Wheat Flour Along With Rice Rava In Single Venue
Contact: Prakrithi Stores, Prasad Bhavana (Near: V. K. Decoratores), Opp: Hotel Mahalasa, Tellar Road, Karkala. Mob: 8296375933

Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142): for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122:NSE: INS23106924)

RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
the right Place for the right customers
QUALITY FIRST AND ALWAYS

# ಭರತನಾಟ್ಯ ವಿದ್ವತ್ ಪರೀಕ್ಷೆಯಲ್ಲಿ ದಕ್ಷಿಣ ಕನ್ನಡಕ್ಕೆ ವಂದನಾ ರಾಣಿ ಅಗ್ರಗಣ್ಯ




ವಂದನಾ ರಾಣಿ, ಇವರು ಭರತನಾಟ್ಯ ವಿದ್ವತ್ ಅಂತಿಮ ಪರೀಕ್ಷೆಯಲ್ಲಿ ದಕ್ಷಿಣ ಕನ್ನಡ ಪ್ರದೇಶದಲ್ಲಿ ಅಗ್ರಗಣ್ಯರಲ್ಲಿ ಒಬ್ಬರಾಗಿರುತ್ತಾರೆ.

ಭರತಾಂಜಲಿಯ ಹಿರಿಯ ಶಿಷ್ಯೆಯರಲ್ಲಿ ಒಬ್ಬರಾದ ವಂದನಾ ರಾಣಿಯವರು ಕೆಎಸ್ಇಇಬಿ ನಡೆಸಿದ ವಿದ್ವತ್ ಅಂತಿಮ ಪರೀಕ್ಷೆಗಳನ್ನು ಪೂರ್ಣಗೊಳಿಸಿ, ದಕ್ಷಿಣ ಕನ್ನಡ ಪ್ರದೇಶದಲ್ಲಿ ಅಗ್ರಗಣ್ಯರಲ್ಲಿ ಒಬ್ಬರಾಗಿ ಹೊರಹೊಮ್ಮಿದ್ದಾರೆ. ಅವರು ಭರತನಾಟ್ಯದ ಪಯಣದಲ್ಲಿ ಹದಿನಾಲ್ಕು ವರ್ಷಗಳ ಕಾಲದ ನಿರಂತರ ಪರಿಶ್ರಮ, ಕೊನೆಯಿಲ್ಲದ ಉತ್ಸಾಹ ಮತ್ತು ಸಾಟಿಯಿಲ್ಲದ ಅಭ್ಯಾಸಗಳು ಈ ಗಮನಾರ್ಹ ಸಾಧನೆಯನ್ನು ಸಾಧ್ಯವಾಗಿಸಿದೆ !

ವಂದನಾ ರಾಣಿ, ಶ್ರೀ ಕೇದಿಗೆ ವಸಂತ ರಾವ್ ಮತ್ತು ಶ್ರೀಮತಿ ರೂಪಾ ರಾಣಿ ಅವರ ಪುತ್ರಿ. ಗುರು ಶ್ರೀಮತಿ ಪ್ರತಿಮಾ ಶ್ರೀಧರ್ ಮತ್ತು ಗುರು ಶ್ರೀ ಶ್ರೀಧರ್ ಹೊಳ್ಳ, ಭರತಾಂಜಲಿ, ಮಂಗಳೂರು ಇವರ ಶಿಷ್ಯೆ. ಇವರು 2021ರಲ್ಲಿ ವಿದ್ವತ್ ಅಂತಿಮ ಪರೀಕ್ಷೆಯಲ್ಲಿ 87% (ಡಿಸ್ಟಿಂಕ್ಷನ್) ಗಳಿಸಿದ್ದಾರೆ. ಇವರು ಭರತಾಂಜಲಿಯ ಪ್ರಮುಖ ನೃತ್ಯಗಾರರಲ್ಲಿ ಒಬ್ಬರು ಮತ್ತು ಚಿದಂಬರದಲ್ಲಿ ನಾಟ್ಯಾಂಜಲಿ ಉತ್ಸವ, ಮೈಸೂರು ದಸರಾ, ಹಂಪಿ ಉತ್ಸವ, ಆಳ್ವಾಸ್ ನುಡಿಸಿರಿ ಮುಂತಾದ ಪ್ರತಿಷ್ಠಿತ ಉತ್ಸವಗಳಲ್ಲಿ ತಮ್ಮ ಗುರುಗಳೊಂದಿಗೆ ಪ್ರದರ್ಶನ ನೀಡಿದ್ದಾರೆ.

ಕರ್ನಾಟಕ ಸಂಗೀತದಲ್ಲಿ ಹಿರಿಯ ಶ್ರೇಣಿಯನ್ನು ಪೂರ್ಣಗೊಳಿಸಿದ ಇವರು, ಗುರು ಶ್ರೀಮತಿ ಸತ್ಯವತಿ ಮುಡಂಬಡಿತ್ತಾಯ, ಮಂಗಳೂರು ಅವರಲ್ಲಿ ಒಂದು ದಶಕದ ತರಬೇತಿಯನ್ನು ಮತ್ತು ಗುರು ಶ್ರೀ ಮಧೂರು ಬಾಲಸುಬ್ರಹ್ಮಣ್ಯ, ಉಡುಪಿ ಇವರಲ್ಲಿ ಸಂಗೀತ ತರಬೇತಿಯನ್ನು ಪಡೆದಿದ್ದಾರೆ. ವಂದನಾ ರಾಣಿ ಅನೇಕ ಗಮನಾರ್ಹವಾದ ನಿರೂಪಣೆಗಳನ್ನು ಹೊಂದಿ ಅವರು ಭರತಾಂಜಲಿಯ ಕೆಲವು ಉತ್ಸವಗಳು ಮತ್ತು ಪ್ರದರ್ಶನಗಳಿಗೆ ಹಿನ್ನೆಲೆ ಗಾಯಕಿಯಾಗಿ ಹಾಡುಗಾರಿಕೆ ಮಾಡಿದ್ದಾರೆ. ಇವರು ಮಂಗಳೂರಿನ ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ (ಆಟೊನೊಮಸ್) ಶುದ್ಧ ವಿಜ್ಞಾನದಲ್ಲಿ ಪದವಿಯನ್ನು ಪೂರ್ಣಗೊಳಿಸಿದ್ದಾರೆ ಮತ್ತು ಪ್ರಸ್ತುತ ತಮಿಳುನಾಡಿನ ಚಿದಂಬರಂನ ಅಣ್ಣಾಮಲೈ ವಿಶ್ವವಿದ್ಯಾಲಯದಿಂದ ಭರತನಾಟ್ಯದಲ್ಲಿ ಸ್ನಾತಕೋತ್ತರ ಅಧ್ಯಯನವನ್ನು ಮಾಡುತ್ತಿದ್ದಾರೆ.



## ಕುಮಾರಿ ಸಾಹಿತ್ಯ ಆರ್ ಭಾಗವತ್

ಕುಮಾರಿ ಸಾಹಿತ್ಯ ಆರ್ ಭಾಗವತ್ ಇವರು ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ ನಡೆಸಿದ 2021–22 ನೇ ಸಾಲಿನ ಭರತನಾಟ್ಯ ಸೀನಿಯರ್ ಪರೀಕ್ಷೆಯಲ್ಲಿ ಶೇಕಡ 90ರಷ್ಟು ಅಂಕ ಗಳಿಸಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರು ಬೆಂಗಳೂರಿನ ಖ್ಯಾತ ಗುರು "ಪೂರ್ಣಿಮಾ ಗುರುರಾಜ್" ಅವರ ಹಿರಿಯ ಶಿಕ್ಷೆಯಾದ ಕುಮಾರಿ "ಸ್ವಾತಿ ಕೃಷ್ಣಕುಮಾರ್" ಅವರ ಶಿಷ್ಯೆ ಹಾಗೂ ಬೆಂಗಳೂರಿನಲ್ಲಿ ನೆಲೆಸಿರುವ ಪುತ್ತೂರಿನ "ರಮೇಶ್ ಭಾಗವತ್" "ವಿದ್ಯಾ" ದಂಪತಿಗಳ ಸುಪುತ್ರಿ. ಇವರು ತಾಳೆಪ್ಪಾಡಿ ಶ್ರೀಮತಿ ಗುಲಾಬಿ ಅಮ್ಮನವರ ಮೊಮ್ಮಗಳು ಹಾಗೂ ಬಾಳೆಪುಣಿ ಸುಬ್ಬರಾವ್ ರಾಜಲಕ್ಷ್ಮೀ ದಂಪತಿಗಳ ಮೊಮ್ಮಗಳು ಕೂಡಾ ಆಗಿರುತ್ತಾರೆ.




## ಕುಮಾರಿ ಸಂಜನಾ ಜೆ

ಕುಮಾರಿ ಸಂಜನಾ ಜೆ ಇವರು ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ ನಡೆಸಿದ 2021–22 ನೇ ಸಾಲಿನ ಭರತನಾಟ್ಯ ಸೀನಿಯರ್ ಪರೀಕ್ಷೆಯಲ್ಲಿ ಶೇಕಡ 87 ರಷ್ಟು ಅಂಕಗಳಿಸಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರು ಬೆಂಗಳೂರಿನ ಖ್ಯಾತ ಗುರು "ಸತ್ಯನಾರಾಯಣ್ ರಾಜು " ಅವರ ಹಿರಿಯ ಶಿಷ್ಯರಾದ "ಮಧು ಚಂದ್ರ" ಅವರ ಶಿಷ್ಯೆ ಹಾಗೂ ಬೆಂಗಳೂರಿನಲ್ಲಿ ನೆಲೆಸಿರುವ ಪುತ್ತೂರಿನ ತಾಳೆಪ್ಪಾಡಿ "ಜಗದೀಶ್ ರಾವ್" "ಸುನೀತಾ ಜಗದೀಶ್" ದಂಪತಿಗಳ ಸುಪುತ್ರಿಯಾಗಿದ್ದಾರೆ. ಇವರು ತಾಳೆಪ್ಪಾಡಿ ಶ್ರೀಮತಿ ಗುಲಾಬಿ ಅಮ್ಮನವರ ಮೊಮ್ಮಗಳು ಹಾಗೂ ಮೂಡಿಗೆರೆ ರತ್ನ ರಮಾನಾಥ್ ರಾವ್ ಮೊಮ್ಮಗಳು ಕೂಡಾ ಆಗಿರುತ್ತಾರೆ.



## ಕುಮಾರಿ ಕೆ.ಅಂಕಿತಾ ರಾವ್

ಕುಮಾರಿ ಕೆ.ಅಂಕಿತಾ ರಾವ್ ಇವರು ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ ನಡೆಸಿದ 2021–22 ನೇ ಸಾಲಿನ ಕರ್ನಾಟಕ ಶಾಸ್ತ್ರೀಯ ಸಂಗೀತದ ಜೂನಿಯರ್ ಪರೀಕ್ಷೆಯಲ್ಲಿ ಶೇಕಡ 83.5 ಅಂಕಗಳಿಸಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರು ಬೆಂಗಳೂರಿನ ಖ್ಯಾತ ಗುರು ಶ್ರೀಮತಿ ರಮ್ಯಾ ಸುಧೀರ್ ಅವರ ಶಿಷ್ಯೆ ಹಾಗೂ ಬೆಂಗಳೂರಿನಲ್ಲಿ ನೆಲೆಸಿರುವ ಕಟೀಲಿನ ಅವಿನಾಶ್ ರಾವ್ ಮತ್ತು ಅನಿತಾ ದಂಪತಿಗಳ ಸುಪುತ್ರಿಯಾಗಿರುತ್ತಾರೆ. ಇವರು ಕಟೀಲಿನ ಶ್ರೀ ಅನಂತರಾಜ ರಾವ್‌ರವರ ಮೊಮ್ಮಗಳುಕೂಡಾ ಆಗಿರುತ್ತಾರೆ.



## ಕುಮಾರಿ ಅದಿತಿ ವಿ.ರಾವ್

ಕುಮಾರಿ ಅದಿತಿ ವಿ.ರಾವ್ ಇವರು ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ನಡೆಸಿದ 2021–22 ನೇ ಸಾಲಿನ ಕರ್ನಾಟಕ ಶಾಸ್ತ್ರೀಯ ಸಂಗೀತದ ಜೂನಿಯರ್ ಪರೀಕ್ಷೆಯಲ್ಲಿ ಶೇಕಡಾ 83 ರಷ್ಟು ಅಂಕಗಳಿಸಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರು ಮಂಗಳೂರಿನ ಕದ್ರಿಯಲ್ಲಿರುವ ಯು.ಎಸ್. ವಿವೇಕ್ ರಾವ್ ಮತ್ತು ಕಲಾನಿಧಿ ದಂಪತಿಗಳ ಸುಪುತ್ರಿ.

# ಬೆಳ್ತಂಗಡಿ : ವಿಪ್ರ ಭಜನಾ ಸಾಮ್ರಾಟ್ ಸಂಪನ್ನ




ಬೆಳ್ತಂಗಡಿ ಶ್ರೀ ಸುಬ್ರಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾವು ಈ ವರ್ಷ ತನ್ನ ರಜತ ಮಹೋತ್ಸವವನ್ನು ಆಚರಿಸುತ್ತಿದ್ದು, ರಜತ ಮಹೋತ್ಸವದ ಅಂಗವಾಗಿ ನಮ್ಮ ಶ್ರೀ ಸುಬ್ರಹ್ಮಣ್ಯ ಸಭಾಭವನ, ಸುಬ್ರಹ್ಮಣ್ಯನಗರ, ಲಾಯಿಲ ಇದರ ನವೀಕರಣವನ್ನು ಮಾಡುತ್ತಿದ್ದು, 2022 ಜನವರಿ 1 ರಂದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಸ್ಥಾನಿಕ ಸಂಘಗಳಿಂದ ತಲಾ ಒಂದು ಭಜನಾ ಸಂಘವನ್ನು ಆಹ್ವಾನಿಸಿ, ಬೆಳ್ತಂಗಡಿ ತಾಲೂಕಿನ ವಿಪ್ರ ಸಂಘಟನೆಗಳ ಭಜನಾ ತಂಡಗಳನ್ನು ಒಳಗೊಂಡಂತೆ ವಿಪ್ರ ಭಜನಾ ಸಾಮ್ರಾಟ್ ನಡೆಸಲಾಗಿದೆ. ಇದು ಅತ್ಯಂತ ಯಶಸ್ವಿಯಾಗಿ ನಡೆದಿದ್ದು 22 ತಂಡಗಳು ಭಾಗವಹಿಸಿವೆ. ನಮ್ಮ ತಾಲೂಕಿನ ಇತರ ಬ್ರಾಹ್ಮಣ ಸಂಘಟನೆಗಳ ಅಭಿಪ್ರಾಯದಂತೆ ಬೆಳ್ತಂಗಡಿ ತಾಲೂಕಿನಲ್ಲಿ ಇಂಥ ಕಾರ್ಯಕ್ರಮಗಳನ್ನು ನಡೆಸಲು ಪ್ರಸ್ತುತ ಸ್ಥಾನಿಕ ಬ್ರಾಹ್ಮಣ ಸಂಘಟನೆಗೆ ಮಾತ್ರ ಸಾಧ್ಯ. ಬೇರೆ ಯಾವ ಸಂಘಟನೆಗಳು ಕೂಡ ಅಷ್ಟರ ಮಟ್ಟಿಗೆ ಬೆಳೆದು ನಿಂತಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಾರೆ.

ಇದೀಗ ಎರಡನೇ ಕಾರ್ಯಕ್ರಮವಾಗಿ ದಿನಾಂಕ 11.03.2022 ನೇ ಶುಕ್ರವಾರ ದಂದು ನಮ್ಮ ಸಭಾದ ವತಿಯಿಂದ ಲೋಕ ಕಲ್ಯಾಣಾರ್ಥವಾಗಿ ಅತ್ಯಂತ ಅದ್ದೂರಿಯಾಗಿ ತ್ರಿಕಾಲ ಪೂಜೆಯನ್ನು ಸಭಾಭವನದಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ನಮ್ಮ ಸಮಾಜದ ಆಡಳಿತವಿರುವ ಬೆಳ್ತಂಗಡಿ ತಾಲೂಕಿನ ಕೂಡಬೆಟ್ಟು ಶ್ರೀ ಸದಾಶಿವ ದೇವಸ್ಥಾನ, ಕೊಕ್ರಾಡಿಯ ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಪುತ್ತೂರು ತಾಲೂಕಿನ ಮಠದಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನ, ರಾಮಕುಂಜದ ಬದೆಂಜ ಸುಬ್ರಹ್ಮಣ್ಯ ದೇವಸ್ಥಾನ, ಕಂಡುಬಂದ ಶ್ರೀ ಜಲದುರ್ಗಾ ದೇವಸ್ಥಾನ, ಸುಳ್ಯ ತಾಲೂಕಿನ ಬಳ್ಪ ಶ್ರೀ ತ್ರಿಶೂಲಿನಿ ದುರ್ಗಾಪರಮೇಶ್ವರಿ ದೇವಸ್ಥಾನಗಳಿಗೆ ತಲಾ 80ಲೀ ದೀಪದ ಎಣ್ಣೆ ಹಾಗೂ ತಲಾ ಒಂದು ಕ್ವಿಂಟಾಲ್ ನೈವೇದ್ಯದ ಅಕ್ಕಿಯನ್ನು ವಿತರಿಸಲಾಯಿತು. ಅಲ್ಲದೆ ಶ್ರೀ ಸುಬ್ರಮಣ್ಯ ಸಭಾದಿಂದ ನಡೆಸಲ್ಪಡುವ ಪುತ್ತೂರಿನ ಶಿವ ಸದನ ಹಿರಿಯರ ವಸತಿಗೃಹಕ್ಕೆ ರೂ. 20,000/– ದೇಣಿಗೆಯನ್ನು ನೀಡಲಾಯಿತು. ನಮ್ಮ ಸಭಾದ ವಲಯ ಸಮಿತಿಗಳ ಸದಸ್ಯರು ಲಲಿತಾ ಸಹಸ್ರನಾಮ ಪಠಣ, ಕುಂಕುಮಾರ್ಚನೆ, ಪುಷ್ಪಾಂಜಲಿಯಲ್ಲಿ ಪಾಲ್ಗೊಂಡಿರುವುದಲ್ಲದೆ, ಭಜನಾ ಕಾರ್ಯಕ್ರಮವನ್ನೂ ನಡೆಸಿಕೊಟ್ಟಿರುತ್ತಾರೆ. ಶ್ರೀ ಅಜೇಯ ಹೆಬ್ಬಾರರ ಪೌರೋಹಿತ್ಯದಲ್ಲಿ ನಡೆದ ಪೂಜೆಯಲ್ಲಿ ಕರ್ತೃಗಳಾಗಿ ಸಭಾದ ಅಧ್ಯಕ್ಷರಾದ ಪಿ.ರಾಧಾಕೃಷ್ಣ ರಾವ್, ಶ್ರೀಮತಿ ಪದ್ಮಾವತಿ ದಂಪತಿಗಳು ಭಾಗವಹಿಸಿದರು.

ಸುಮಾರು 500ಕ್ಕಿಂತಲೂ ಹೆಚ್ಚು ಸದಸ್ಯರು ಭಾಗವಹಿಸಿ ಶ್ರೀದೇವಿಯ ಪ್ರಸಾದವನ್ನು ಸ್ವೀಕರಿಸಿ ಸಂತುಷ್ಟರಾದರು.

# ಕಾರ್ಕಳದ ಕುವರ ಕಮಾಂಡರ್ ಅಶ್ವಿನ್ ಎಂ. ರಾವ್‌ರಿಗೆ ಮತ್ತೊಂದು ಚಿನ್ನದ ಪದಕ



ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ. ಸಾಧಿಸುವ ಛಲ, ನಿರ್ದಿಷ್ಟ ಗುರಿ ಇದ್ದರೆ ಜೀವನದಲ್ಲಿ ಏನನ್ನೂ ಗೆಲ್ಲಬಹುದು ಎಂಬುದಕ್ಕೆ ನಿದರ್ಶನ ಕಾರ್ಕಳದ ಮಣ್ಣಿನ ಮಗ ಅಶ್ವಿನ್ ಎಂ.ರಾವ್.

ಕಾರ್ಕಳದ ಪ್ರತಿಷ್ಠಿತ ಶ್ರೀಮದ್ ಭುವನೇಂದ್ರ ಪ್ರೌಢಶಾಲಾ ನಿವೃತ್ತ ಮುಖ್ಯೋಪಾಧ್ಯಾಯ ಶ್ರೀ ವಿ.ಮನೋಹರ ರಾವ್ ಹಾಗೂ ತೆಳ್ಳಾರು ಪೌಢಶಾಲಾ ಸ್ಥಾಪಕ ಮುಖ್ಯೋಪಾಧ್ಯಾಯಿನಿ, ರಾಜ್ಯ ಪ್ರಶಸ್ತಿ ವಿಜೇತೆ ಶ್ರೀಮತಿ ಸಾವಿತ್ರಿ ಮನೋಹರ ರಾವ್‌ರವರ ಏಕಮಾತ್ರ ಪುತ್ರ ಅಶ್ವಿನ್ ಎಂ.ರಾವ್ ಆಂಗ್ಲಮಾಧ್ಯಮದಲ್ಲಿ ಕಲಿತ ಮಕ್ಕಳು ಮಾತ್ರ ಉನ್ನತ ವ್ಯಾಸಂಗಕ್ಕೆ ಉನ್ನತ ಹುದ್ದೆಗೆ ಯೋಗ್ಯರು ಎಂಬ ಪ್ರಚಲಿತ ಅಭಿಪ್ರಾಯಕ್ಕೆ ಇವರು ಅಪವಾದ.

ತನ್ನ ಪ್ರಾಥಮಿಕ ಶಿಕ್ಷಣವನ್ನು ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಪೆರ್ವಾಜೆ ಹಾಗೂ ಪ್ರೌಢ ಶಿಕ್ಷಣವನ್ನು ಭುವನೇಂದ್ರ ಪ್ರೌಢ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತವರು. ಮುಂದೆ ನಿಟ್ಟೆ ಶಿಕ್ಷಣ ಸಂಸ್ಥೆಯಿಂದ ಇಂಜಿನಿಯರಿಂಗ್ ಪದವಿಯನ್ನು ಉನ್ನತ ಚರ್ಚೆಯಲ್ಲಿ ಪಡೆದು ನೌಕಾ ದಳದ ಲಿಖಿತ ಹಾಗೂ ಪ್ರಾಯೋಗಿಕ ಪರೀಕ್ಷೆಗಳಲ್ಲಿ ತೇರ್ಗಡೆಗೊಂಡು 2005ರಲ್ಲಿ ಗುಜರಾತಿನ ಜಾಮ್ ನಗರದಲ್ಲಿ ತಮ್ಮ ವೃತ್ತಿಗೆ ಪಾದಾರ್ಪಣೆ ಮಾಡಿದರು.

ತೀಕ್ಷ್ಣಮತಿಗಳೂ, ವಿದ್ಯಾದಾಹಿಯೂ ಆದ ಇವರು ನೌಕರಿಯ ಜೊತೆ ಜೊತೆಗೆ ಶಿಕ್ಷಣ ಮುಂದುವರಿಸಿ ಮೂರು ಸ್ನಾತಕೋತ್ತರ ಪದವಿಗಳನ್ನು ತನ್ನ ಮುಡಿಗೇರಿಸಿಕೊಂಡರು ತಾನು ಕೇರಳದ ಕೊಚ್ಚಿಯ ನೌಕಾದಳದ ವೈಮಾನಿಕ ಸ್ನಾತಕೋತ್ತರ ಪದವಿ ಪಡೆದ ತರಬೇತಿ ಸಂಸ್ಥೆಯ ಸಹ ನಿರ್ದೇಶಕರಾಗಿ ಪದೋನ್ನತಿ ಹೊಂದಿದ ಕೀರ್ತಿ ಇವರದು. ಅಲ್ಲದೇ ತಾನು ಅಲ್ಲಿ ಮಾಡಿದ ಆವಿಷ್ಕಾರಗಳಿಗಾಗಿ ಬಂಗಾರದ ಪದಕ ಪಡೆದ ಭಾಗ್ಯಶಾಲಿ.

ಇದೀಗ ರಕ್ಷಣಾ ಇಲಾಖೆಯ ಆದೇಶದಂತೆ ಬೆಂಗಳೂರಿನ D.R.D.O ಅಂದರೆ ರಕ್ಷಣಾ, ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಗೆ ಸಹ ನಿರ್ದೇಶಕರಾಗಿ ನಿಯುಕ್ತಿಗೊಂಡಿರುತ್ತಾರೆ. ಆದಮ್ಯ ಜ್ಞಾನದಾಹಿಯಾದ ಶ್ರೀಯುತರು ಅಲ್ಲಿಯೂ ಕೆಲಸದ ಜೊತೆಗೆ ತಮ್ಮ ಸತತ ಅಭ್ಯಾಸ ಮಾಡಿ ಮತ್ತೊಮ್ಮೆ ಬಂಗಾರದ ಪದಕವನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ಕಾರ್ಕಳದ ಕುವರನಿಗೆ ದೊರೆತ ಕೀರ್ತಿ ಅಭಿನಂದನಾರ್ಹವಾಗಿದೆ.



– ತ್ರೋಬಾಲ್ ವಿಜೇತ ಬಾರ್ಕೂರು ತಂಡ



– ತ್ರೋಬಾಲ್ ವಿಜೇತ ರನ್ನರ್ಸ್ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ–ಎ ತಂಡ



– ಶ್ರೀಶಾರದಾ ಟ್ರೋಫಿ ರನ್ನರ್ಸ್ ಸ್ಟ್ರೈಕರ್ಸ್ ಕುಂದಾಪುರ ತಂಡ



– ಶ್ರೀಶಾರದಾ ಟ್ರೋಫಿ ಕ್ರೀಡಾಕೂಟದಲ್ಲಿ ಭಾಗವಹಿಸಿದ ತಂಡಗಳ ಸಮಾವೇಶ

## ಶ್ರೀಶಾರದಾ ಟ್ರೋಫಿ–2022ರಲ್ಲಿ ಭಾಗವಹಿಸಿದ ತಂಡದ ಸದಸ್ಯರ ಅಭಿಪ್ರಾಯ

ಧನ್ಯವಾದಗಳು.... ಶ್ರೀ ಶಾರದಾ ಟ್ರೋಫಿ 2022 ರ ಆಯೋಜಕರಿಗೆ... "ಅತಿ ಅದ್ಭುತವಾದ ರೀತಿಯ ಆಯೋಜನೆ, ಯಾವುದೇ ಕುಂದು ಕೊರತೆ ಇಲ್ಲದ ರೀತಿಯಲ್ಲಿ ಕಾರ್ಯಕ್ರಮವನ್ನು ಸಂಯೋಜನೆ ಮಾಡಿದ್ದೀರಿ. ನಿಮ್ಮೆಲ್ಲರ ಪರಿಸರ ಪ್ರೇಮ ಪರಿಸರದ ಕಾಳಜಿಯನ್ನು ಎಲ್ಲರಿಗೂ ಬಾಳೆಗಿಡವನ್ನು ನೀಡುವ ಮೂಲಕ ತೋರ್ಪಡಿಸಿದ್ದೀರಿ. ಉಂಡು ಹರಸಬೇಕಾಗಿಲ್ಲ ನೊಂದು ಶಪಿಸಬೇಕಾಗಿಲ್ಲ ಎಂಬ ಮಾತಿದೆ, ಅದೇರೀತಿ ನಿಮ್ಮ ಅತಿಥಿ ಸತ್ಕಾರವು ಆತ್ಮೀಯವಾಗಿದ್ದು, ಎಲ್ಲರ ಹಸಿವೆ ಶುರುವಾಗಿತ್ತು ದಣಿವನ್ನು ನಿವಾರಿಸಿದ್ದೀರಿ. ಸಮಾಜದ ಎಲ್ಲ ಬಾಂಧವರನ್ನು ಒಂದೆಡೆ ಸೇರಿಸುವ ಉದ್ದೇಶದಿಂದ ಈ ಕ್ರೀಡಾಕೂಟವನ್ನು ಆಯೋಜಿಸಿದ್ದೀರಿ ಯಶಸ್ವಿಯಾಗುತ್ತೀರಿ. ನಿಮ್ಮ ಈ ಪ್ರಯತ್ನಕ್ಕೆ ಆಭಾರಿಯಾಗಿದ್ದೇವೆ, ನಮ್ಮೆಲ್ಲರ ಪಾಲಿನ ಅವಿಸ್ಮರಣೀಯ ದಿನವನ್ನಾಗಿಸಿದ್ದೀರಿ. ಮತ್ತೊಮ್ಮೆ ಧನ್ಯವಾದಗಳು

– ನಿತಿನ್ ರಾವ್, ಬಂಟ್ವಾಳ ತಂಡದ ಸಂಘಟಕರು

I eco.... I thank you very much to organizing committee, all the members who are directly or indirectly put their efforts and who are the real reason for success, i thank all the sponsers and also all the teams & players.... I have to say promptly, It was really fun and we enjoyed playing Sri Sharada Trophy 2022. See you all next year....!!!!

–ಅವಿನಾಶ್ ರಾವ್ , ಕಾರ್ಕಳ ತಂಡದ ಕಪ್ತಾನ

Very happy to participate in sharadha trophy because all the arrangements are very good.. congratulations to winner and Runners.. thanks to the organisers.. well supported by every team members..

– ಗುರು ಏರ್ಮಾಳು

Good Arrangements and We'll organised and Good Team work . Congratulations to Winner Runners Organisers and all Participating Teams

–ಅನಿಲ್ ನೆಲ್ಲಿಕುಂಜ, ಮಂಗಳೂರು ತಂಡದ ಕಪ್ತಾನ



ದಿನಾಂಕ 03.04.22 ರಂದು ಕಬ್ಬಿನಾಲೆಯ ಸಂಪಿಗೆ ಮನೆಯಲ್ಲಿ ನಡೆದ ಸಂಪಿಗೆ ಕುಟುಂಬದ ಸದಸ್ಯರೆಲ್ಲರ ವಾರ್ಷಿಕ ಸಮಾವೇಶ. ಇದೇ ಸಂದರ್ಭದಲ್ಲಿ ಸಂಪಿಗೆ ಮನೆಯ ಶೀ ಜಗದೀಶ ಹೆಬ್ಬಾರ್ ಹಾಗೂ ಸುಮಂಗಲಾ ದಂಪತಿಗಳನ್ನು ಸನ್ಮಾನಿಸಲಾಯ್ತು.



ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ಪ್ರಧಾನ ವ್ಯವಸ್ಥಾಪಕ ರವೀಂದ್ರ ಬಾಬು ಅವರೊಂದಿಗೆ ಕಾರ್ಪೊರೇಷನ್ ಬ್ಯಾಂಕ್‌ನ ನಿವೃತ್ತ ಡಿಜಿಎಂ ಸಿ.ಎಸ್.ರಾವ್‌ರವರು ಸಂಸ್ಥಾಪನಾ ದಿನವನ್ನು ಉದ್ಘಾಟಿಸಿದರು.

With Best Compliments From :

BUILDING DREAMS, ENHANCING LIVES.









NAKSHATRA — GANDHINAGAR —

SOLITAIRE — HATHILL, —

HABITAT ONE 54 An Urban Lifestyle — DEREBAIL —

ANANTESSH — CAR STREET, —

Land Trades® BUILDERS & DEVELOPERS

BUILDING TRUST, DELIVERING VALUE

MANGALURU'S LEADING REAL ESTATE COMPANY

RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in

Follow us on :

Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org